# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper

70,000

HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:01 • ಸಂಚಿಕೆ:340 • ನೋಂದಣಿ ನಂ.:KARKAN27911 • ವಿಜಯನಗರ • 14.06.2024 • ಶುಕ್ರವಾರ • ಪುಟ:04 • ಬೆಲೆ:2

Volume:01 • Issue:340 • Reg.No:KARKAN27911 • VIJAYANAGARA • 14.06.2024 • Friday • Page:04 • Rs:2


# ಕೊಲೆಗಡುಕರಿಗೆ ಜೀವನ ಪೂರ್ತಿ ಕಠಿಣ ಜೈಲುವಾಸ ಶಿಕ್ಷೆಗೆ ಆಗ್ರಹ



**ಹಂಪಿ ಟೈಮ್ಸ್ ಕೂಡ್ಲಿಗಿ**

ಅಮಾಯಕ, ಮುಗ್ದ ಜಂಗಮ ಸಮಾಜದ ರೇಣುಕಾ ಸ್ವಾಮಿ ಎಂಬ ವ್ಯಕ್ತಿಯ ಬರ್ಬರ ಹತ್ಯೆಯನ್ನು ಖಂಡಿಸಿ ಗುರುವಾರ ತಾಲೂಕು ಜಂಗಮ ಸಮಾಜ ಸಂಸ್ಥೆ ವತಿಯಿಂದ ತಹಸೀಲ್ದಾರ್ ಎಂ.ರೇಣುಕಾ ಮುಖಾಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ನೀಡಿದರು.

ತಾಲೂಕು ಜಂಗಮ ಸಮಾಜ ಸಂಸ್ಥೆಯ ತಾಲೂಕು ಅಧ್ಯಕ್ಷ ಎಚ್.ಎಂ. ಗಂಗಾಧರ ಸ್ವಾಮಿ ಮಾತನಾಡಿ, ಜಂಗಮ ಸಮಾಜದ ಬಡ ಕುಟುಂಬದ ರೇಣುಕಾ ಸ್ವಾಮಿ ಎನ್ನುವ ವ್ಯಕ್ತಿ ಜೀವನೋಪಾಯಕ್ಕಾಗಿ ಅಪೋಲೋ ಫಾರ್ಮಸಿಯಲ್ಲಿ ಕೆಲಸ ನಿರ್ವಹಿಸಿ ತನ್ನ ತಂದೆ, ತಾಯಿ ಹಾಗೂ ಗರ್ಭಿಣಿ ಹೆಂಡತಿಯನ್ನ ಸಲುಹುತ್ತಿದ್ದ, ಆದರೆ ಕೇವಲ ಒಂದು ಹೆಣ್ಣಿಗೆ ಸಂದೇಶ ಕಳುಹಿಸಿದ ಎಂಬ ಆಪಾದನೆ ಮೇರೆಗೆ ಅವನನ್ನು ಅಪಹರಿಸಿ ಮೃಗಗಳು ಸಹ ವರ್ತಿಸಲಾರದ ರೀತಿಯಲ್ಲಿ ಮನಸೋ ಇಚ್ಚೆ ಹಿಂಸೆ ಕೊಟ್ಟು ಬಿಬಿತ್ಸವಾಗಿ ಹತ್ಯೆ ಮಾಡಿದ್ದಾರೆ. ಈ ದುಷ್ಕೃತ್ಯದಲ್ಲಿ ಭಾಗಿಯಾಗಿ ಈಗ ಪೋಲಿಸ್ ವಶದಲ್ಲಿರುವ ಎಲ್ಲಾ ಕೊಲೆಗಡುಕರಿಗೆ ಜೀವನ ಪೂರ್ತಿ ಜೈಲುವಾಸ ಅನುಭವಿಸುವ ಅತ್ಯಂತ ಉಗ್ರವಾಗಿರುವ ಶಿಕ್ಷೆಯನ್ನು ನೀಡಬೇಕು. ಕಿರಾತಕರು ಅತ್ಯಂತ ಪ್ರಭಾವ ಶಾಲಿಗಳಾಗಿರುವುದರಿಂದ ಸಾಕ್ಷಿ ನಾಶಪಡಿಸುವ ಅನುಮಾನವಿದೆ.

ಮೃತ ರೇಣುಕಾ ಸ್ವಾಮಿ ಕುಟುಂಬದವರಿಗೆ ಜೀವ ಬೆದರಿಕೆಗಳು ಬರಬಹುದು, ಈಗಾಗಲೇ ಮೃತ ರೇಣುಕಾ ಸ್ವಾಮಿ ಪತ್ನಿ 5 ತಿಂಗಳ ಗರ್ಭಿಣಿ ಮತ್ತು ವೃದ್ದ ತಂದೆ, ತಾಯಿಗಳು ಇರುವುದರಿಂದ ಆ ಕುಟುಂಬಕ್ಕೆ ಸೂಕ್ತ ಭದ್ರತೆ ಒದಗಿಸುವುದರೊಂದಿಗೆ ಸೂಕ್ತ ನ್ಯಾಯ ಒದಗಿಸಿ ಕೊಡಬೇಕು. ಅಪರಾಧಿಗಳ ಮೂಲಕ ರೇಣುಕಾ ಸ್ವಾಮಿ ಕುಟುಂಬಕ್ಕೆ ಪರಿಹಾರ ನೀಡಿಸಬೇಕು ಹಾಗೂ ಸರ್ಕಾರಿ ನೌಕರಿ ಕೊಡಿಸಬೇಕು ಎಂದು ಸರ್ಕಾರಕ್ಕೂ ಮತ್ತು ಘನ ನ್ಯಾಯಲಯಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇವೆ ಎಂದು ಒತ್ತಾಯಿಸಿ ಮನವಿ ಪತ್ರ ನೀಡಿದರು. ತಹಸೀಲ್ದಾರ್ ಎಂ.ರೇಣುಕಾ ಮನವಿ ಪತ್ರ ಸ್ವೀಕಾರ ಮಾಡಿದರು. ತಾಲೂಕು ಜಂಗಮ ಸಮಾಜ ಸಂಸ್ಥೆ ತಾಲೂಕು ಕಾರ್ಯದರ್ಶಿ ಕೆ.ಎಚ್.ಎಂ.ಸಚಿನ್ ಕುಮಾರ್, ಖಜಾಂಚಿ ಕೆ.ಎಚ್.ಎಂ.ವಿವೇಕ್, ತಾಲೂಕು ವಕೀಲರ ಸಂಘದ ಅಧ್ಯಕ್ಷ ಜಿ.ಎಂ.ಮಲ್ಲಿಕಾರ್ಜುನ, ಚಂದ್ರಶೇಖರಯ್ಯ ಸ್ವಾಮಿ, ಜೆ.ವೈ. ವೀರಭದ್ರಯ್ಯ, ಎ.ಎಂ.ಸಂತೋಷ, ಟಿ.ಎಚ್.ಎಂ.ವೀರಭದ್ರಯ್ಯ ಇದ್ದರು.

# ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ ಬೆಳ್ಳಿಮಹೋತ್ಸವಕ್ಕೆ ವಿಶೇಷ ಪೂಜೆ

## ರಜತ, ಪುಷ್ಪಗಳಿಂದ ಅಲಂಕೃತ ಸಿದ್ಧಿ ವಿನಾಯಕ



## ಮೈಕ್ರೋ ನ್ಯೂಸ್

### ಹೊಸಪೇಟೆ ಆದರ್ಶ ವಿದ್ಯಾಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಹೊರವಲಯದ ಜಂಬುನಾಥಹಳ್ಳಿಯಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯಕ್ಕೆ 2024–25ನೇ ಸಾಲಿನಲ್ಲಿ 7, 8 ಮತ್ತು 9ನೇ ತರಗತಿಯಲ್ಲಿ ಖಾಲಿ ಇರುವ ಸೀಟುಗಳನ್ನ ಭರ್ತಿ ಮಾಡಲು ತಾಲೂಕಿನ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸ ಬಯಸುವ ವಿದ್ಯಾರ್ಥಿಗಳು ಜೂ.21 ರೊಳಗೆ ಶಾಲೆಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದಾಗಿದೆ. ಜೂ.26 ರಂದು ಬೆಳಿಗ್ಗೆ 11 ಗಂಟೆಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗಳಿಗೆ ಪರೀಕ್ಷೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ 8951645809, 6363671429 ಸಂಪರ್ಕಿಸಬಹುದು ಎಂದು ಶಾಲೆ ಪ್ರಾಂಶುಪಾಲರಾದ ಸುಲೋಚನಬಾಯಿ ತಿಳಿಸಿದ್ದಾರೆ.

### ಪ್ರವಾಸಿ ಮಾರ್ಗದರ್ಶಿ ತರಬೇತಿ : ಆಯ್ಕೆಪಟ್ಟಿಗೆ ಆಕ್ಷೇಪಣೆ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ವತಿಯಿಂದ 2023–24ನೇ ಸಾಲಿನಲ್ಲಿ 75 ಇತರೆ ಪ್ರವಾಸಿ ಗೈಡ್‌ಗಳಿಗೆ ಹಾಗೂ ಜಲಪಾತ, ಅರಣ್ಯಧಾಮ, ಪರಿಸರಧಾಮ ಇನ್ನಿತರೆ ಪ್ರಾಕೃತಿಕ ನೈಸರ್ಗಿಕ ಪ್ರವಾಸಿ ತಾಣಗಳಲ್ಲಿ ಕಾರ್ಯನಿರ್ವಹಿಸಲು 25 ನೇಚರ್ ಗೈಡ್‌ಗಳು ಸೇರಿ ಒಟ್ಟು 100 ಜನ ಅಭ್ಯರ್ಥಿಗಳಿಗೆ ಪ್ರವಾಸಿ ಮಾರ್ಗದರ್ಶಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿತ್ತು.

ಈ ಸಂಬಂಧ ಅಧಿಸೂಚನೆಯಲ್ಲಿ ತಿಳಿಸಲಾದ ಷರತ್ತುಗಳು ಮತ್ತು ನಿಬಂಧನೆಗಳಂತೆ ಪ್ರವಾಸಿ ಮಾರ್ಗದರ್ಶಿ ತರಬೇತಿಗೆ ಅರ್ಹ ಹಾಗೂ ಅನರ್ಹವಾದ ಅಭ್ಯರ್ಥಿಗಳ ವಿವರವನ್ನು ಸಿದ್ದಪಡಿಸಲಾಗಿದೆ. ಈ ಪಟ್ಟಿಯನ್ನು ಕಮಲಾಪುರ ಲೋಟಸ್ ಮಹಲ್ ಹತ್ತಿರದ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರ ಕಚೇರಿಯ ಸೂಚನಾಫಲಕದಲ್ಲಿ ಪ್ರಕಟಿಸಲಾಗಿರುತ್ತದೆ. ಈಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನಾದರು ಇದ್ದಲ್ಲಿ ಸೂಕ್ತ ಹಾಗೂ ಸಮರ್ಥ ದಾಖಲೆಗಳೊಂದಿಗೆ ಜೂನ್ 19ರೊಳಗೆ ಕಮಲಾಪುರ ಲೋಟಸ್ ಮಹಲ್ ಹತ್ತಿರದ ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಕಚೇರಿ ವೇಳೆಯಲ್ಲಿ ಸಲ್ಲಿಸಬಹುದಾಗಿದೆ. ಅವಧಿ ಮೀರಿಬಂದ ಆಕ್ಷೇಪಣೆಗಳನ್ನು ಮಾನ್ಯ ಮಾಡಲಾಗುವುದಿಲ್ಲ ಎಂದು ವಿಜಯನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಪ್ರವಾಸಿ ಮಾರ್ಗದರ್ಶಿ ತರಬೇತಿಯ ಆಯ್ಕೆ ಸಮಿತಿಯ ಅಧ್ಯಕ್ಷರಾಗಿರುವ ಅನುರಾಧ ಜಿ ತಿಳಿಸಿದ್ದಾರೆ.

# ವಿಶ್ವ ರಕ್ತದಾನಿಗಳ ದಿನ : ಇಂದು ವಿಶೇಷ ಜಾಥಾ

**ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ರಕ್ತದಾನಿಗಳ ದಿನಾಚರಣೆಯ ನಿಮಿತ್ತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜೂನ್ 14ರಂದು ಬೆಳಗ್ಗೆ 9 ಗಂಟೆಗೆ ನಗರದ ಅಂಬೇಡ್ಕರ್ ವೃತ್ತದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯವರೆಗೆ ಜಾಥಾ ನಡೆಯಲಿದೆ.

ಬಳಿಕ ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿಯಲ್ಲಿ ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜನರಲ್ಲಿ ರಕ್ತದಾನದ ಕುರಿತು ಜಾಗೃತಿ ಮೂಡಿಸುವುದು, ರಕ್ತದಾನಿಗಳಿಗೆ ಕೃತಜ್ಞತೆ ಸಲ್ಲಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಸಂಡೂರು:** ಸಂಡೂರು ಜೆಸ್ಕಾಂ ಉಪ ವಿಭಾಗದ ಕಾರ್ಯ ಮತ್ತು ಪಾಲನೆ ಕಚೇರಿಯಲ್ಲಿ ಜೂನ್ 15ರಂದು ಮಧ್ಯಾಹ್ನ 3ಕ್ಕೆ ವಿದ್ಯುತ್ ಗ್ರಾಹಕರ ಸಂವಾದ ಸಭೆ ಜರುಗಲಿದೆ. ತಾಲೂಕು ವ್ಯಾಪ್ತಿಯ ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರು ಸಭೆಯಲ್ಲಿ ಪಾಲ್ಗೊಳ್ಳಬಹುದು ಎಂದು ಜೆಸ್ಕಾಂ ಎಇ ಕೆ.ಎ.ಉಮೇಶ್ ಕುಮಾರ್ ತಿಳಿಸಿದ್ದಾರೆ.

# ಧರೆಗುರುಳಿದ ಬೇವಿನಮರ ವಿದ್ಯುತ್ ಕಂಬಗಳು: ಸಂಚಾರ ವ್ಯತ್ಯಯ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ನಿರಂತರ ಸುರಿಯುತ್ತಿರುವ ಮಳೆಯಿಂದ ಪಟ್ಟಣದ 9ನೇ ವಾರ್ಡನಲ್ಲಿ ಮಳೆಗೆ ಬೃಹತ್ ಬೇವಿನಮರ ವಿದ್ಯುತ್ ಕಂಬವೊಂದರ ಮೇಲೆ ಬಿದ್ದ ಪರಿಣಾಮ 10 ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದರಿಂದ ವಿದ್ಯುತ್ ವ್ಯತ್ಯಯವಾಗಿದೆ. ಯಾವುದೇ ಜೀವಹಾನಿಯಾಗಿಲ್ಲ.

ಮರ ರಸ್ತೆಯ ಮೇಲೆ ಬಿದ್ದಿದರಿಂದ ಕೆಲಕಾಲ ಸಾರ್ವಜನಿಕರಿಗೆ ಸಂಚಾರಕ್ಕೆ ಅಡ್ಡಿಯಾಯಿತು. ಇನ್ನೂ ಈ ಬಗ್ಗೆ ವಿಷಯ ತಿಳಿಯುತ್ತಲೇ ಸ್ಥಳಕ್ಕೆ ಜೆಸ್ಕಾಂಸಿಬ್ಬಂದಿಗಳು ದೌಡಾಯಿಸಿದ್ದಾರೆ.ಅಲ್ಲದೆ ಜೆಸಿಬಿ ಮೂಲಕ, ಮರ ಹಾಗು ವಿದ್ಯುತ್ ಕಂಬಗಳನ್ನು ತೆರವುಗೊಳಿಸಿ ರಸ್ತೆ ಸಂಚಾರಕ್ಕೆ ಅನುವು ಮಾಡಿದರು. ಸಿಬ್ಬಂದಿ ಹಾಗೂ ಇಲಾಖೆಯ ತ್ವರಿತ ಸ್ಪಂದನೆ ಸ್ಥಳೀಯರು ಪ್ರಶಂಸೆ ವ್ಯಕ್ತಪಡಿಸಿದರು. ಮುನಿರಾಬಾದಿನ ಪವರ್ ಹೌಸ್ ನಲ್ಲಿ ತುರ್ತುಕಾಮಗಾರಿ ನಿಮಿತ್ತ, ಪಟ್ಟಣದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿತ್ತು.



ಇದರ ಪರಿಣಾಮವಾಗಿ ಭಾರಿ ಅವಗಢ ತಪ್ಪಿದಂತಾಗಿದೆ ಎಂದು ಸ್ಥಳಿಯ ನಿವಾಸಿಗಳು ನಿಟ್ಟುಸಿರು ಬಿಟ್ಟರು.

# ಜನಸ್ಪಂದನಾ ಕಾರ್ಯಕ್ರಮ ತಾಲೂಕುವಾರು ವೇಳಾಪಟ್ಟಿ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸೂಚನೆಯಂತೆ ವಿಜಯನಗರದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಜಂಟಿಯಾಗಿ ತಾಲೂಕು ಮಟ್ಟದಲ್ಲಿ ನಡೆಸುವ ವಿಜಯನಗರ ಜಿಲ್ಲೆಯ ತಾಲೂಕುಮಟ್ಟದ ಜನಸ್ಪಂದನಾ ಕಾರ್ಯಕ್ರಮದ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಈ ಜನತಾ ದರ್ಶನ ಕಾರ್ಯಕ್ರಮದಲ್ಲಿ ಸರ್ಕಾರದ ನಿರ್ದೇಶನದಂತೆ ಜಿಲ್ಲೆಯ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು ತಪ್ಪದೇ ಹಾಜರಾಗಲು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದ್ದಾರೆ. ಜಿಲ್ಲೆಯ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಯುವ ಈ ಜನಸ್ಪಂದನ ಕಾರ್ಯಕ್ರಮದಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಬಹುದಾಗಿದೆ ಎಂದು ವಿಜಯನಗರದ ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂನ್ 21ರಂದು ಬೆಳಿಗ್ಗೆ 11 ಗಂಟೆಗೆ ಹೂವಿನಹಡಗಲಿ ತಾಲೂಕಿನ ಪ್ರವಾಸಿ ಮಂದಿರದಲ್ಲಿ,
ಜೂನ್ 24ರಂದು ಬೆಳಿಗ್ಗೆ 11 ಗಂಟೆಗೆ ಹರಪನಹಳ್ಳಿ ತಾಲೂಕಿನ ಪ್ರವಾಸಿ ಮಂದಿರದಲ್ಲಿ,
ಜೂನ್ 26 ರಂದು ಬೆಳಿಗ್ಗೆ 11 ಗಂಟೆಗೆ ಕೂಡ್ಲಿಗಿ ತಾಲೂಕಿನ ಪ್ರವಾಸಿ ಮಂದಿರದಲ್ಲಿ,
ಜೂನ್ 29ರಂದು ಬೆಳಿಗ್ಗೆ 11 ಗಂಟೆಗೆ ಹಗರಿಬೊಮ್ಮನಹಳ್ಳಿ ತಾಲೂಕಿನ ತಾಲೂಕು ಆಫೀಸ್ ಆವರಣದಲ್ಲಿ,
ಜುಲೈ 2ರಂದು ಬೆಳಿಗ್ಗೆ 11 ಗಂಟೆಗೆ ಹೊಸಪೇಟೆಯ ಒಳಾಂಗಣ ಕ್ರೀಡಾಂಗಣದಲ್ಲಿ ಹಾಗೂ
ಜುಲೈ 5ರಂದು ಬೆಳಿಗ್ಗೆ 11 ಗಂಟೆಗೆ ಕೊಟ್ಟೂರು ತಾಲೂಕು ಕ್ರೀಡಾಂಗಣ ಆವರಣದ ಹೆಚ್.ಜಿ.ರಾಜ್ ಸಭಾಭವನದಲ್ಲಿ ತಾಲೂಕುಮಟ್ಟದ ಜನಸ್ಪಂದನಾ ಕಾರ್ಯಕ್ರಮಗಳು ನಡೆಯಲಿವೆ


ಮಕ್ಕಳ ಜ್ಞಾನ ವಿಕಾಸಕ್ಕೆ ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

ಕನ್ನಡ ಟ್ಯೂಷನ್
KANNADA TUITION
Kannada Tuition Are Done Here
Kannada Language Tuition for 10th , PUC State, CBSE and ICSE Syllabus are done here. with Individual attention, helping out students with their assignments Betterment of Their Academic Performance
*****
For More Details
SUMALATHA B.M
94491 90966
N.C.Colony , HOSAPETE
VIJAYANAGARA

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ

ಕನಿಷ್ಟ ವೆಚ್ಚ ಗರಿಷ್ಠ ಪ್ರಚಾರ
Minimum Cost Maximum Promotion

Advertising is a marketing activity that can help you to reach out to potential customers and encourage them to buy your products or services.

increase customer reach
build customer awareness of your business and brand
promote the benefits of your products or services
communicate information about your business
increase sales and demand
gain an advantage over your competitors.

PUBLISH YOUR ADVERTISEMENT IN HAMPI TIMES DAILY NEWSPAPER
Minimum Cost Maximum Promotion



SCAN & READ HAMPI TIMES E-PAPER

ವಿಜಯನಗರ ಜಿಲ್ಲೆಯ ಹೆಮ್ಮೆ ಸ್ಥಳೀಯ ನಂ.1 ಕನ್ನಡ ದಿನಪತ್ರಿಕೆ ಹಂಪಿ ಟೈಮ್ಸ್ ಇ-ಪೇಪರ್ ವಿಶ್ವದ ವಿವಿಧೆಡೆ ಇರುವ
70000+
ಕನ್ನಡ ಓದುಗರ ಕೈಯಲ್ಲಿ...

☑ Discount Offers
☑ Good Creative Desgin
☑ Economical Ads Rates
☑ Combination Offers Available

CALL US NOW 94486 33038

www.hampitimes.com/epaper.hampitimes.com

Hampi Times E-Paper Daily Readers @
in India : Karnataka, Maharastra, Kerala, Telangana, Tamilnadu, Andrapradesh, Uttar Pradesh, Gujarat, Haryan, Odisha and other places.
international: United States - Sweden - United Kingdom, Canada

hampitimes@gmail.com
www.hampitimes.com
epaper.hampitimes.com

ಹಂಪಿ ಟೈಮ್ಸ್ HAMPI TIMES

## ಬೆಳಕಿನ ಹಾದಿ

# ಮೌನ ಮತ್ತು ನೈಜ ಜ್ಞಾನ

■ **ಗುರು ಹಿರೇಮಠ್, ಹಗರಿಬೊಮ್ಮನಹಳ್ಳಿ**

ಸತ್ಯದೆಡಗಿನ ನಮ್ಮ ಪಯಣದಲ್ಲಿ, ಜೊತೆಗೆ ನೈಜ ಜ್ಞಾನ ಪಡೆಯುವ ಒಂದು ಆಕಾಂಕ್ಷೆಯಲ್ಲಿ ನಾವು ಮಾಡಬೇಕಾದ ಪ್ರಪ್ರಥಮ ಕಾರ್ಯವೇನೆಂದರೆ



ಮನಸ್ಸನ್ನು ಮೌನಗೊಳಿಸುವುದು. ಈ ಕ್ರಿಯೆಯ ಬಗ್ಗೆ ಮಹರ್ಷಿ ಶ್ರೀ ಅರವಿಂದರು ಅತ್ಯಂತ ಸೂಕ್ಷ್ಮವಾಗಿ ವಿವರಿಸಿದ್ದು, ಮೌನ ಮನಸ್ಸು ನಿಜವಾದ ಜ್ಞಾನ ಮತ್ತು ಭಗವಂತನ ಅನುಭವ ಪಡೆಯುವಲ್ಲಿ ಮೊಟ್ಟಮೊದಲ ಹೆಜ್ಜೆಯಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಒಬ್ಬ ಯೋಗಿಯು ತನ್ನ ಸಂದೇಶ ಪತ್ರದಲ್ಲಿ ನೀಡಲಾದ ಎರಡು ಹೇಳಿಕೆಗಳನ್ನು ಶ್ರೀ ಅರವಿಂದರು ಉಲ್ಲೇಖಿಸಿದ್ದು, ಅದರಲ್ಲಿ

**1) ಜ್ಞಾನವಿರುವುದೇ ಮೌನದಲ್ಲಿ :**

ಮನಸ್ಸಿನ ಆಂತರಿಕ ಮೌನದಲ್ಲಿಯೇ ಜ್ಞಾನವು ಹೊರಹೊಮ್ಮುವಂಥದ್ದು, ಮನಸ್ಸಿನ ಸಾಮಾನ್ಯ ಚಟುವಟಿಕೆಯು ಕೇವಲ ಮೇಲ್ಮೈ ಅಥವಾ ತೋರಿಕೆಯ ಚಿಂತನೆಗಳನ್ನು ಮತ್ತು ಪ್ರಾತಿನಿಧ್ಯಗಳನ್ನು ಸೃಷ್ಟಿಸುವುದರಿಂದ ಇವಾವವೂ ನೈಜ ಜ್ಞಾನದ ಮೂಲಗಳಾಗಿರುವುದಿಲ್ಲ. ಮಾತು ಸಾಮಾನ್ಯವಾಗಿ ಅತ್ಯಂತ ಬಾಹ್ಯ ಅಥವಾ ತುಂಬಾ ಮೇಲ್ನೋಟದ ಸ್ವಭಾವದ ಅಭಿವ್ಯಕ್ತಿಯಾಗಿದೆ. ಆದ್ದರಿಂದ ಒಂದು ಭಾಷಣವಾಗಲಿ, ಸಭೆಯಾಗಲಿ, ಒಬ್ಬನು ತನ್ನನ್ನು ತಾನು ಮಾತುಗಳ ಮೂಲಕ ಅಭಿವ್ಯಕ್ತಪಡಿಸುವುದು ತನ್ನ ಶಕ್ತಿಯನ್ನು ವ್ಯರ್ಥ ಮಾಡಿಕೊಂಡಂತೆ. ಮೇಲಾಗಿ ಈ ಬಗೆಯ ಸ್ವಭಾವವು ನಿಜ ಜ್ಞಾನವನ್ನು ತರುವ ಆಂತರಿಕ ಆಲಿಸುವಿಕೆಯನ್ನು ತಡೆಯುತ್ತದೆ.

**2) ಗಮನಿಸುವುದರ ಮೂಲಕ ನೀವು ಯೋಚಿಸುವುದನ್ನು ಗೆಲ್ಲುತ್ತೀರಿ:**

ಅಂದರೆ ಮೌನದಲ್ಲಿಯೇ ನಿಜವಾದ ಕ್ರಿಯಾತ್ಮಕ ಚಿಂತನೆಯ ರೂಪಗಳು ಮೂಡಿಬರುವವು. ಅವು ತಮಷ್ಟಕ್ಕೆ ತಾವೇ ಕಾರ್ಯಗತಗೊಳ್ಳಬಹುದು ಅಥವಾ ವಾಸ್ತವೀಕರಣಗೊಳ್ಳಬಹುದು. ಈ ಮೌನದಲ್ಲಿ ಹೊರಹೊಮ್ಮುವ ಆಲೋಚನೆಯು ಒಂದು ಶಕ್ತಿಯಾಗಿದ್ದು ಅದು ತನ್ನನ್ನು ತಾನೇ ಸಾಕ್ಷಾತ್ಕರಿಸಿಕೊಳ್ಳಬಲ್ಲದು. ಆದರೆ ಸಾಮಾನ್ಯ ತೋರಿಕೆಯ ಚಿಂತನೆಯು ಅಂಥದ್ದಲ್ಲ. ಅದರಲ್ಲಿ ಎಲ್ಲಕ್ಕಿಂತ ಹೆಚ್ಚಿನ ಶಕ್ತಿಯ ವ್ಯರ್ಥವಿದೆ. ಬದಲಾಗಿ ಶಾಂತ ಮತ್ತು ಮೌನ ಮನಸ್ಸಿನಲ್ಲಿ ಬರುವ ಆಲೋಚನೆಯಲ್ಲಿ ಮಾತ್ರ ಶಕ್ತಿ ಇರುತ್ತದೆ. 'ಕಡಿಮೆ ಮಾತನಾಡಿ ಮತ್ತು ಶಕ್ತಿಯನ್ನು ಪಡೆಯಿರಿ' ಎಂಬ ಮಾತು ಮೂಲಭೂತವಾಗಿ ಇದೇ ಅರ್ಥವನ್ನು ಹೊಂದಿದೆ. ಬರೀ ನೈಜ ಜ್ಞಾನ ಮಾತ್ರವಲ್ಲದೆ ಮನಸ್ಸಿನ ಶಾಂತತೆ ಮತ್ತು ಮೌನದಲ್ಲಿ ಹೆಚ್ಚಿನ ಶಕ್ತಿಯು ಹರಿದು ಬರುತ್ತದೆ. ಜೊತೆಗೆ ಶಾಂತ ಮನಸ್ಸಿನ ಆಳಕ್ಕೆ ಇಳಿದು ಉನ್ನತ ಮಟ್ಟದ ಪ್ರಜ್ಞೆಯಿಂದ ಬರುವಂತದ್ದನ್ನು ಗಮನಿಸಲು ಸಾಧ್ಯವಾಗುತ್ತದೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

# ಆಧುನಿಕತೆಯ ಅರಿವಿನಲ್ಲಿ-ಪ್ರಾದೇಶಿಕತೆಯ ಮರೆವು



ನಿನ್ನೆಗಿಂತ ಇಂದು ಇಂದಿಗಿಂತ ನಾಳೆಗೆ ತೀವ್ರವಾಗಿ ಬೆಳೆಯುತ್ತಿರುವ ಎಲ್ಲ ರೀತಿಯ ಆಧುನಿಕ ಜೀವನ ಶೈಲಿಗಳು ಮಕ್ಕಳ ಮನಸ್ಸನ್ನು ಹೆಚ್ಚಾಗಿ ಚಂಚಲಗೊಳಿಸುತ್ತಿವೆ. ನಿನ್ನೆ ದೊರೆತ ವಸ್ತು ವಿಷಯ ಇಂದಿಗೆ ಹಳೆಯದು ಇಂದು ಅನುಭವಿಸಿದ ವಸ್ತು ವಿಷಯ ನಾಳೆಗೆ ಹಳಸು ಎಂಬ ದೃಷ್ಟಿಕೋನ ಬೆಳೆಯುತ್ತಿದೆ. ಇಂದು ನಗರಪ್ರದೇಶಗಳು ಯಾಂತ್ರಿಕವಾಗಿ ಬೆಳೆಯುತ್ತಿವೆ. ಈ ನಗರ ಸಂಸ್ಕೃತಿಯಲ್ಲಿ ಜಾಗತಿಕ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ ವಿಪರೀತವಾಗಿ ಅದರ ಒತ್ತಡದಿಂದ ವಿಭಕ್ತ ಕುಟುಂಬಗಳು ದಾರಿ ತಪ್ಪುತ್ತಿವೆ.

ನಗರ ಪ್ರದೇಶದಲ್ಲಿ ವಿಭಕ್ತ ಕುಟುಂಬಗಳ ಹೆಚ್ಚಾಗಿ ಮಕ್ಕಳಲ್ಲಿ ಬಂಧುಬಾಂಧವರ ಆತ್ಮೀಯತೆ, ಪ್ರೀತಿ, ವಿಶ್ವಾಸದ ಭ್ರಾತೃತ್ವದ ಭಾವನೆಗಳು ಸೊರಗುತ್ತಿವೆ. ಬಾಂಧವ್ಯದ ಅಕ್ಕ, ಅಣ್ಣ, ತಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಮ್ಮ, ದೊಡ್ಡಪ್ಪ, ಮಾವ, ಅತ್ತೆ, ತಾತ, ಅಮ್ಮ, ಅವ್ವ ಇತ್ಯಾದಿ ಸಂಬಂಧವಾಚಿಕಗಳನ್ನು ಬಳಸದೇ ಎಲ್ಲರಿಗೂ ಆಂಟಿ, ಅಂಕಲ್ ಎಂದು ಒಂದೆ ರೀತಿಯಲ್ಲಿ ಕರೆಯುವುದು. ಈ ಸಂಬಂಧಗಳ ಮಹತ್ವ ಹಿನ್ನೆಲೆಯನ್ನೂ ಪೋಷಕರು ತಿಳಿಸಿಕೊಡಬೇಕಾಗಿದೆ.

ಈಚೆಗೆ ಸುಮಾರು ವರ್ಷಗಳಿಂದ ಮಕ್ಕಳ ಓದು ವಿದ್ಯೆಯೆಲ್ಲಾ ಕೇವಲ ಅಂಕಗಳ ಆಧಾರದ ಮೇಲೆ ನಿಂತಿದೆ. ಶಾಲಾ ಕಾಲೇಜುಗಳಲ್ಲಿ ಬೋಧಕರು ಮಕ್ಕಳಿಗೆ ಮಾನವೀಯ ಮೌಲ್ಯಗಳ ವಿವೇಚನೆ ಹೇಳಿಕೊಡುತ್ತಿಲ್ಲ. ನಮ್ಮ ಪರಂಪರೆಯ ಸಂಸ್ಕೃತಿಯ ಜ್ಞಾನದ ಮಹತ್ವ ತಿಳಿಸಿಕೊಡುವ ಪ್ರಯತ್ನ ಆಗುತ್ತಿಲ್ಲ. ಮಗುವಿಗೆ ಸ್ಥಳೀಯ ಭಾಷೆಯಲ್ಲಿ ಶಿಕ್ಷಣ ದೊರೆತಾಗ ಜ್ಞಾನದ ಬೆಳವಣಿಗೆ ಉತ್ತಮವಾಗುತ್ತದೆಂದು ವೈಜ್ಞಾನಿಕವಾಗಿ ಶೋಧಿಸಲಾಗಿದೆ. ಆದರೆ ಆಂಗ್ಲಭಾಷೆಯ ವ್ಯಾಮೋಹದಿಂದ ನಮ್ಮ ಭಾರತೀಯ ಸಂಸ್ಕೃತಿ–ಸಂಸ್ಕಾರಗಳು ಮಾಯವಾಗುತ್ತಿವೆ. ಇಂದು ಮಕ್ಕಳೊಂದಿಗೆ ಮನೆಯಲ್ಲಿ ಬೆರೆಯಲು ಅಪ್ಪ, ಅಮ್ಮ, ಅಣ್ಣ, ಅಕ್ಕ, ತಂಗಿ ಯಾರಿಗೂ ಸಮಯವಿಲ್ಲ. ಅವರವರ ಕೆಲಸಕಾರ್ಯಗಳಲ್ಲಿ ಮಗ್ನರಾಗಿರುವುದರಿಂದ ಅನಿವಾರ್ಯವಾಗಿ ಮಕ್ಕಳು ನೂರಾರು ಚಾನೆಲ್‌ಗಳಿಗೆ ಜೋತು ಬಿದ್ದಿದ್ದಾರೆ. ಮೊಬೈಲ್, ವಿಡಿಯೋಗೇಮ್, ಕಂಪ್ಯೂಟರ್, ಇಂಟರ್ನೆಟ್, ವಾಟ್ಸ್ಯಾಪ್, ಫೇಸ್‌ಬುಕ್ಕಗಳಲ್ಲಿ ಮುಳುಗಿದ್ದಾರೆ.

ಕಂಪ್ಯೂಟರ್ ಮೊಬೈಲ್‌ಗಳಲ್ಲಿ ಆಡುವ ಆಟಗಳನ್ನು ಮಕ್ಕಳು ಹತ್ತಿದಲ್ಲಿ ನೋಡುವುದರಿಂದ ಅವರ ಕಣ್ಣಿನ ತೊಂದರೆಗಳು



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471

Hampi Times E-paper SCAN AND READ

ಚಿಕ್ಕವರಿದ್ದಾಗಿನಿಂದಲೇ ಆರಂಭವಾಗುತ್ತಿವೆ. ಹಾಗೆಯೇ ಅನೇಕ ವಾಹಿನಿಗಳಲ್ಲಿ ಪ್ರದರ್ಶನ ಗೊಳ್ಳುವ ಹಿಂಸೆ, ನೋವು, ಅವಮಾನ, ವಿಕೃತ ಭಾವನೆ ಗಳ ವೈಭವೀಕರಣ ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಉದಾಹರಣೆಗೆ: ಒಂದು ಮಗು ದಿನಕ್ಕೆ ಸುಮಾರು 2 ತಾಸು ಟಿ.ವಿ. ವೀಕ್ಷಿಸಿದರೆ ಅದು ಹೈಸ್ಕೂಲ್ ಬರುವ ವೇಳೆಗೆ ಏಳು ಸಾವಿರ ಕೊಲೆ ಒಂಭತ್ತು ಸಾವಿರಕ್ಕೂ ಹಿಂಸಾತ್ಮಕ ಘಟನೆಗಳನ್ನು ನೋಡಿರುತ್ತದೆಂದು ಅಮೇರಿಕಾದಲ್ಲಿ ನಡೆದ ಒಂದು ಸಂಶೋಧನೆ ಯಿಂದ ತಿಳಿದುಬಂದಿದೆ.

ಅದೇರೀತಿ ವಿಡಿಯೋ ಗೇಮ್‌ಗಳಲ್ಲಿನ ಆಟಗಳೂ ಸಹ ಹಿಂಸೆಯಾಕಾರದಲ್ಲಿದ್ದು ಬಾಕ್ಸಿಂಗ್, ಕಾರ್ ಬೈಕ್ ರೇಸಿಂಗ್, ಪಿಸ್ತೂಲಿನಿಂದ ಸುಡುವದು, ಅಪಘಾತ ಮಾಡುವುದು ಮುಂತಾದವುಗಳಲ್ಲಿ ತಲ್ಲೀನರಾಗಿರುತ್ತಾರೆ. ಮಕ್ಕಳು ಬಾಲ್ಯದಲ್ಲಿ ಇಂತಹ ಕ್ರೌರ್ಯತನದ ಕಾರ್ಯಕ್ರಮಗಳನ್ನು ನೋಡುತ್ತಾ ಬಂದರೆ ಸಮಾಜದಲ್ಲಿ ಅವರ ಭಾವನೆಗಳು ಕೆರಳುತ್ತವೆ. ಆದ್ದರಿಂದ ಮನೆಯಲ್ಲಿ ಪೋಷಕರು ಮಕ್ಕಳ ಮೇಲೆ ಸದಾ ಗಮನವಿಟ್ಟಿರಬೇಕು. ಅವರನ್ನು ಹತ್ತಿರದಲ್ಲಿ ಕೂಡಿಸಿಕೊಂಡು ಸಾಹಿತ್ತಿಕ ಧಾರ್ಮಿಕ ಆಚಾರ–ವಿಚಾರಗಳ ಬಗೆಗೆ ಬೋಧನೆ ಮಾಡಬೇಕು. ಮಕ್ಕಳಿಗೆ ಮನಸ್ಸನ್ನು ತಟ್ಟುವ ಕಥೆ ಕಾವ್ಯಗಳನ್ನು ಹೇಳಿಕೊಡಬೇಕು. ಅವರ ನಡೆ ನುಡಿಗಳನ್ನು ತಿದ್ದುತ್ತಾ ಸುಸಂಸ್ಕೃತರನ್ನಾಗಿಸುವ ನಿಟ್ಟಿನಲ್ಲಿ ಉತ್ತಮ ಸಂಸ್ಕಾರವನ್ನು ನೀಡಬೇಕು.

ಇಂದು ಬಹಳಷ್ಟು ಮಕ್ಕಳು ಶಾಲೆ, ಹೊಂವರ್ಕ, ಇಂಟರ್‌ನೆಟ್‌ನಲ್ಲಿಯೇ ಮುಳುಗಿರುವುದರಿಂದ ಹೊರಗೆ ಸ್ವಚ್ಛಂದವಾಗಿ ಒಬ್ಬರಿಗೊಬ್ಬರು ಬೆರೆಯುವುದು, ಆಟವಾಡುವುದು ಇಲ್ಲವೇ ಇಲ್ಲ. ಇದರಿಂದ ಅವರ ದೈಹಿಕ ಬೆಳವಣಿಗೆ ಕುಂಠಿತವಾಗಿ ನಿಶ್ಯಕ್ತಿ ಆವರಿಸಿದೆ. ಇಂದು ಆಟಗಳೆಂದರೆ ಕ್ರಿಕೆಟ್ ವೈಭವೀಕರಿಸಲಾಗಿದೆ. ಜನಪದ ಆಟಗಳಾದ ಗೋಲಿ, ಬುಗುರಿ, ಕಬಡಿ, ಚಿಣ್ಣಿದಾಂಡು, ಕೋಕೋ, ಮರಕೋತಿ ಮುಂತಾದವುಗಳ ಬಗೆಗೆ ಮಕ್ಕಳಿಗೆ ಗೊತ್ತೇ ಇಲ್ಲ. ಇವುಗಳ ಬಗೆಗೆ ತಿಳಿದಂತವರು ಮಾಹಿತಿ ನೀಡಿ ಈ ಆಟಗಳ ಮಹತ್ವ ತಿಳಿಸಿಕೊಡಬೇಕಾಗಿದೆ. ಒಳ್ಳೆಯ ಪುಸ್ತಕಗಳ ಅಧ್ಯಯನದಿಂದ ನೈತಿಕ ಶಿಸ್ತು, ತಾತ್ವಿಕ ಚಿಂತನೆಗೆ ಹೆಚ್ಚು ಅನುಕೂಲ.

ಭಾರತೀಯ ಸಂಸ್ಕೃತಿಯ ಹಬ್ಬ ಜಾತ್ರೆ ಉತ್ಸವಗಳ ಪರಿಚಯ ಕಡಿಮೆಯಾಗುತ್ತಿದೆ. ಇವುಗಳ ಆಚರಣೆ ತಿಳಿಸಬೇಕಾಗಿದೆ. ಇಂದು ವಿಭಕ್ತ ಕುಟುಂಬಗಳಲ್ಲಿ ಯಾವುದೇ ಆಚಾರಣೆಗಳನ್ನು ಸಡಗರವಿಲ್ಲದೇ ಯಾಂತ್ರಿಕವಾಗಿ ಮಾಡುತ್ತಿರುವುದು ವಿಪರ್ಯಾಸವೇ ಸರಿ. ಮಕ್ಕಳನ್ನು ಏಕಾಂಗಿಯಾಗಿ ಕೂಡಿಸಿ, ಸತತವಾಗಿ ಓದು ಹೊಂವರ್ಕ ಬರಹದಲ್ಲಿ ತಲ್ಲೀನಗೊಳಿಸಿ, ಯಾರೊಂದಿಗೆ ಸಹಜವಾಗಿ ಬೆರೆಯದಂತಹ ವಾತಾವರಣ ನಿರ್ಮಾಣವಾಗಿದೆ. ಕೇವಲ ಅಂಕಗಳೇ ಜೀವನಕ್ಕೆ ಅಡಿಪಾಯವೆಂಬ ಭ್ರಮೆಯಲ್ಲಿ ಅವರನ್ನು ಮುಳುಗಿಸಿದ್ದೇವೆ. ಒಟ್ಟಾರೆ ಮಕ್ಕಳ ಮನಸ್ಸನ್ನು ಕಟ್ಟುವ, ಸೌಹಾರ್ದತೆ ಬೆಳೆಸುವ, ವಿನಯದಿಂದ ಬದುಕುವ ಸಂಸ್ಕಾರವನ್ನು ನಾವು ಅವರ ಮನದಲ್ಲಿ ಬಿತ್ತಬೇಕಾಗಿದೆ. ಆಧುನಿಕತೆಯ ಅರಿವಿನಲ್ಲಿ ಪ್ರಾದೇಶಿಕತೆಯ ಮಹತ್ವವನ್ನು ಕಡೆಗಣಿಸದಿರುವುದು ಬಹಳ ಮುಖ್ಯ.

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಇದೇನು ಸಂಸ್ಕೃತಿ? ಸಭ್ಯತೆ!....
# ನಾವು ಗೌರವಿಸಬೇಕಾಗಿರುವ ವ್ಯಕ್ತಿಗಳು

ದೇವರನ್ನು ಮತ್ತು ಬೆರಳೆಣಿಕೆಯ ಒಬ್ಬಿಬ್ಬರನ್ನು ಹೊರತುಪಡಿಸಿ ವ್ಯಕ್ತಿ ಪೂಜೆ ಮಾಡಲೇಬಾರದು ಎಂಬ ಭಾವ ನನ್ನದು. ತಂದೆ ತಾಯಿಯನ್ನು ಪ್ರೀತಿಸಬೇಕು, ಅವರಲ್ಲೂ ಕೂಡ ಮನುಷ್ಯ ಸಹಜವಾದ ರಾಗ ದ್ವೇಷಗಳಿರುವುದರಿಂದ ಅವರ ವ್ಯಕ್ತಿತ್ವದ ಎಲ್ಲ ಒಳಿತು ಕೆಡುಕುಗಳೊಂದಿಗೆ ಅವರನ್ನು ಗೌರವಿಸಬೇಕು.

* ನಾಡು ಅತ್ಯಂತ ಗೌರವಿಸುವ ಸ್ವಾಮೀಜಿಯೊಬ್ಬರು ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ಹಗರಣದ ಆರೋಪದಿಂದಾಗಿ ತಮ್ಮ ಸಾಮಾಜಿಕ ಗೌರವ, ಸ್ಥಾನಮಾನಗಳನ್ನು ಕಳೆದುಕೊಂಡು ಜೈಲಿನ ಕಂಬಿಗಳ ಹಿಂದೆ ನಿಂತಿದ್ದಾರೆ.
* ಮತ್ತೊಂದು ಮಠದ ಸ್ವಾಮಿಗಳು ಕೂಡ ಇಂತಹದೇ ಹಗರಣದಲ್ಲಿ ಕೆಲ ವರ್ಷಗಳ ಹಿಂದೆ ಭಾಗಿಯಾಗಿದ್ದರು.... ಅವರ ಮೇಲೂ ಆರೋಪ ಪ್ರತ್ಯಾರೋಪಗಳ ಸುರಿಮಳೆ ಸುರಿದಿತ್ತು.
* ಕೆಲ ವರ್ಷಗಳ ಹಿಂದೆ ನಟಿಯೊಬ್ಬಳು ಯಶಸ್ವಿ ನಾಯಕ ನಟನೊಬ್ಬನಿಂದ ತನಗಾದ ಮುಜುಗರವನ್ನು ಹೇಳಿಕೊಂಡಾಗ, ತಪ್ಪು ಒಪ್ಪುಗಳ ಪರಾಮರ್ಶೆ ಮಾಡಲು ಸಾಧ್ಯವಾಗದಿದ್ದರೂ ಆಕೆಯ ವಿರುದ್ಧ ಎಲ್ಲರೂ ತಿರುಗಿ ಬಿದ್ದರು. ಮುಂದೆ ಆಕೆ ಹಲವಾರು ಅವಕಾಶಗಳನ್ನು ಕಳೆದುಕೊಂಡಳು.
* ರಾಷ್ಟ್ರೀಯ ಪಕ್ಷವೊಂದರ ಮುಖ್ಯ ಭಾಗವಾಗಿದ್ದು, ಇಡೀ ಕುಟುಂಬವೇ ರಾಜಕಾರಣದಲ್ಲಿದ್ದು ಸ್ವಯಂ ತಾನೂ ಕೂಡ ಸಂಸದನಾಗಿದ್ದ ವ್ಯಕ್ತಿಯೊಬ್ಬ ತನ್ನ ಅಧಿಕಾರ ಮದದಿಂದ ಸಾಕಷ್ಟು ಜನ ಹೆಣ್ಣು ಮಕ್ಕಳ ಬಾಳು ಹಾಳಾಗಲು ಕಾರಣವಾಗಿ ದೇಶ ತೊರೆದು ಹೋಗಿ ಇದೀಗ ಮರಳಿ ಬಂದ ನಂತರ ವಿಚಾರಣೆಯನ್ನು ಎದುರಿಸುತ್ತಿದ್ದಾನೆ
* ಮತ್ತೋರ್ವ ನಟಿ ವಿರೋಧಿಸಬೇಕೆಂಬ ಒಂದೇ ಕಾರಣಕ್ಕಾಗಿ ಸರ್ಕಾರ ಕೊಡ ಮಾಡಿರುವ ಉಚಿತ ಬಸ್ ಪ್ರಯಾಣ ಮಾಡುವ ಹೆಣ್ಣು ಮಕ್ಕಳನ್ನು ಕುರಿತು ಅಸಭ್ಯವಾಗಿ ಮಾತನಾಡಿದ್ದಾಳೆ. ಇಂತಹ ಮಾತುಗಳನ್ನು ಆಡಿದ ಮಾಜಿ ಮುಖ್ಯಮಂತ್ರಿಗಳೊಬ್ಬರು ಕೂಡ ಜನರ ಆಕ್ರೋಶಕ್ಕೆ ಗುರಿಯಾಗಿ ಕ್ಷಮಾಪಣೆ ಕೇಳಿದರು.
* ಕಳೆದ ವಾರ ಜವಾಬ್ದಾರಿಯುತ ಪ್ರಜೆಗಳ ಪ್ರತಿನಿಧಿ ಯಾಗಿ ಆಯ್ಕೆಯಾದ ಚಿತ್ರನಟಿಯೊಬ್ಬಳು ಹರತಾಳಕ್ಕೆ ಬರುವ ಹೆಣ್ಣು ಮಕ್ಕಳ ಅನಿವಾರ್ಯತೆಯನ್ನು, ಬದುಕಿನ ದಾರಿಯನ್ನು ಹಂಗಿಸಿ ಮಾತನಾಡಿದ್ದಾಳೆ. ಕೋಟಿ ಕೋಟಿಗಳಲ್ಲಿ ಹಣ ದುಡಿಯುವ ಆಕೆಗೆ ತುತ್ತು ಅನ್ನಕ್ಕಾಗಿ ಪರದಾಡುವ, ತನ್ನಿಡೀ ಸಂಸಾರವನ್ನು ಸಾಗಿಸಲು ಒದ್ದಾಡುವ ಭಾರತದ ಕೋಟ್ಯಾಂತರ ಹೆಣ್ಣು ಮಕ್ಕಳ ಬದುಕಿನ ಬವಣೆಯ ಅರಿವಾದರೂ ಹೇಗೆ ಆದೀತು??
* ಇದೀಗ ಬಂದಿರುವ ಹೊಸ ಸುದ್ದಿ ಸಾಲು ಸಾಲು ಹಿಟ್ ಚಿತ್ರಗಳನ್ನು ಕೊಟ್ಟ ಓರ್ವ ಯಶಸ್ವಿ ನಾಯಕ ನಟ ತನ್ನ ಸ್ನೇಹಿತೆಗೆ ಕೆಟ್ಟದಾಗಿ ಮೆಸೇಜ್ ಮಾಡಿದ ಒಂದೇ ಕಾರಣಕ್ಕೆ ಒಬ್ಬ ವ್ಯಕ್ತಿಗೆ ಬುದ್ಧಿ ಕಲಿಸಲು ಹೋಗಿ ಆತನ ಜೀವವನ್ನೇ ತೆಗೆಯಲು ಕಾರಣನಾಗಿದ್ದಾನೆ ಎಂಬ ಮಾತುಗಳು ತನಿಖಾಧಿಕಾರಿಗಳಿಂದ ಕೇಳಿಬರುತ್ತಿದೆ.

ಇದನ್ನೆಲ್ಲ ನೋಡುತ್ತಿದ್ದರೆ ನಮ್ಮ ಸಾಂಸ್ಕೃತಿಕ ಅಧಪತನದ ಹಾದಿಗಳು ನಿಚ್ಚಳವಾಗಿ ತೋರುತ್ತವೆ. ನಮ್ಮಲ್ಲಿರುವ ಮಾನವೀಯ ಮೌಲ್ಯಗಳು ಕುಸಿಯುತ್ತಿರುವ ಸಂಕೇತ ನಮಗೆ ಸ್ಪಷ್ಟವಾಗಿ ಕಾಣಸಿಗುತ್ತದೆ. ಇವರಾರು ನಮಗೆ ಆದರ್ಶಪ್ರಾಯರಲ್ಲ, ಇವರಾರು ನಮ್ಮ ನಾಯಕರಲ್ಲ, ಇವರಾರಿಗೂ ನಾವು ಅಭಿಮಾನಿಗಳಾಗಬೇಕಾಗಿಲ್ಲ.

ಸಾಮಾಜಿಕ ಜಾಲತಾಣಗಳಲ್ಲಿ ಚರ್ವಿತ ಚರ್ವಣವಾಗಿ ವರದಿಯಾಗುವ ಚಲನಚಿತ್ರ ತಾರೆಯರ, ಸೆಲೆಬ್ರಿಟಿಗಳ ಬದುಕಿನ ರೀತಿ ನೀತಿಗಳನ್ನು ನಮಗೆ ತೋಚಿದಂತೆ ಅರ್ಥೈಸಿಕೊಳ್ಳುವ ಜನರು ಅವರನ್ನು ಅಭಿಮಾನದಿಂದ ನೋಡುತ್ತಾರೆ, ಹುಚ್ಚು ಪ್ರೀತಿಯಿಂದ ಅವರ ಹೆಸರುಗಳನ್ನು ದೇಹದ ಅಂಗಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ, ಅವರ ಚಲನಚಿತ್ರಗಳು ಬಿಡುಗಡೆಯಾದಾಗ ನಾಲ್ಕಾಳೆತ್ತರದ ಕಟೌಟ್ಗಳನ್ನು ಹಾಕಿ ಹಾಲಿನ ಅಭಿಷೇಕ ಮಾಡಿ ತಮ್ಮ ಹುಚ್ಚು ಅಭಿಮಾನವನ್ನು ಮೆರೆಯುತ್ತಾರೆ !



ವೀಣಾ ಹೇಮಂತಗೌಡ ಪಾಟೀಲ್ ಲೇಖಕರು, ಮುಂಡರಗಿ, ಗದಗ


Hampi Times E-paper SCAN AND READ

ಯಾವುದೇ ವ್ಯಕ್ತಿ ಪರಿಪೂರ್ಣನಲ್ಲ... ಅಂತೆಯೇ ಯಾರೂ ಪೂಜನೀಯರಲ್ಲ. ನಿಜವಾಗಿ ಪೂಜಿಸಲ್ಪಡುವವರು ಕೂಡ ಒಂದೊಮ್ಮೆ ಮಾನವ ಸಹಜ ಗುಣಗಳಿಗೆ ತಮ್ಮನ್ನು ತಾವು ಒಡ್ಡಿಕೊಂಡು ಬದುಕಿನ ಬೆಂಕಿಯಲ್ಲಿ ಬಿದ್ದು ಶುದ್ಧ ಅಪರಂಜಿ ಚಿನ್ನವಾಗಿ ಹೊರಹೊಮ್ಮಿದವರು. ನಾವು ಗೌರವಿಸಬೇಕಾಗಿರುವುದು ನಮ್ಮನ್ನು ಹೆತ್ತು ಹೊತ್ತು, ಸಾಕಿ ಸಲಹಿ, ಜೀವಿತದ ಕಷ್ಟಾರ್ಜಿತವನ್ನು ನಮ್ಮ ಮೇಲೆ ಸುರಿದು ವಿದ್ಯಾಭ್ಯಾಸ ಕೊಡಿಸಿ ನಾವು ಬದುಕಿನ ದಾರಿಯಲ್ಲಿ ಮುನ್ನಡೆಯುವಾಗ ದೂರ ನಿಂತು ಕಣ್ತುಂಬಿಕೊಳ್ಳುವ ಪಾಲಕರನ್ನು, ಅವರ ಶ್ರಮ, ಪ್ರೀತಿ ಮತ್ತು ಮಮತೆಯನ್ನು ನಾವು ಗೌರವಿಸಬೇಕಾಗಿರುವುದು ಹಿಡಿ ಪಗಾರಕ್ಕಾಗಿ ತಮ್ಮೆಲ್ಲ ವಿದ್ಯೆಯನ್ನು ನಮಗೆ ಧಾರೆಯೆರೆದು, ನಮ್ಮೆಲ್ಲ ಅವಗುಣಗಳನ್ನು ಕಟೆದು ಕಗ್ಗಲ್ಲಿನಂತಿದ್ದ ನಮ್ಮನ್ನು ಸುಂದರ ಶಿಲ್ಪವನ್ನಾಗಿ ರೂಪಿಸಿದ ನಮ್ಮ ಗುರುಗಳನ್ನು ಮತ್ತು ಅವರ ಶಿಕ್ಷಣವನ್ನು. ನಾವು ಗೌರವಿಸಬೇಕಾಗಿರುವುದು ನಮ್ಮೆಲ್ಲಾ ಕಷ್ಟ ಸುಖಗಳಲ್ಲಿ ನೋವು ನಲಿವಿನಲ್ಲಿ ಭಾಗಿಯಾಗುವ, ಬದುಕಿನಲ್ಲಿ ಏನೇ ಬಂದರೂ ನಮ್ಮ ಜೊತೆಗೆ ಹೆಗಲು ಕೊಡುವ, ಭರವಸೆ ತುಂಬುವ, ತಪ್ಪು ಮಾಡಿದರೆ ಕಾಲೆಳೆದು ತಿದ್ದುವ ನಮ್ಮ ಸ್ನೇಹಿತರನ್ನು ಮತ್ತು ಅವರ ಸ್ನೇಹವನ್ನು ನಾವು ಗೌರವಿಸಬೇಕಾಗಿರುವುದು ಜೀವಿತದ ಕೊನೆಯವರೆಗೂ ನಮ್ಮೊಂದಿಗೆ ಬಾಳುತ್ತೇನೆ ಎಂದು ದೇವರ ಸಾಕ್ಷಿಯಾಗಿ ಗುರು ಹಿರಿಯರ ಸಾಕ್ಷಿಯಾಗಿ ನಮ್ಮನ್ನು ವಿವಾಹವಾಗುವ ನಮ್ಮ ಸಂಗಾತಿಯನ್ನು, ನಮ್ಮೆಲ್ಲ ಸಿಟ್ಟು, ಸೆಡವು, ನೋವು, ನಿಷ್ಠುರಗಳನ್ನು ಸಹಿಸಿಕೊಂಡು ಬದುಕಿನಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕುವ ಸಂಗಾತಿಯನ್ನು,ಅವರ ಪ್ರೀತಿಯನ್ನು.ನಾವು ಗೌರವಿಸಬೇಕಾಗಿರುವುದು ಬಿಸಿಲಾದರೇನು ಮಳೆಯಾದರೇನು ಉತ್ತಿ, ಬಿತ್ತಿ, ಬೆಳೆ ಬೆಳೆದು ನಮಗೆ ಅನ್ನ ಕೊಡುವ ರೈತನನ್ನು, ತಾನು ಅರೆ ಹೊಟ್ಟೆ ಉಂಡರೂ ಇಡೀ ಜಗತ್ತಿನ ಹೊಟ್ಟೆ ತುಂಬಿಸುವ ಅನ್ನದಾತನನ್ನು ಮತ್ತು ಆತನ ಶ್ರಮವನ್ನು ನಾವು ಗೌರವಿಸಬೇಕಾಗಿರುವುದು ತನ್ನ ತಂದೆ, ತಾಯಿ,ಹೆಂಡತಿ, ಮಕ್ಕಳನ್ನು, ಕುಟುಂಬವನ್ನು ಸಾವಿರಾರು ಕಿಲೋಮೀಟರ್ಗಳ ದೂರದಲ್ಲಿ ಇದ್ದು ಕಡುಬಿಸಿಲು ಚಳಿ ಮಳೆ ಎನ್ನದೆ ಬೆಚ್ಚದೆ ಬೆದರದೆ ನಮ್ಮ ದೇಶದ ಗಡಿ ರಕ್ಷಣೆಯನ್ನು ಮಾಡುವ, ದೇಶದ ಯಾವುದೇ ಮೂಲೆಯಲ್ಲಿಯೂ ತೊಂದರೆಯಾದರೆ ಕ್ಷಣಾರ್ಧದಲ್ಲಿ ಬಂದು ಕಾಪಾಡುವ ಮಿಲಿಟರಿ ಯೋಧರನ್ನು ನಾವು ಗೌರವಿಸಬೇಕಾಗಿರುವುದು ನಮ್ಮ ಮನೆ ಮಂದಿಯಲ್ಲವಾದರೂ ನಮ್ಮ ಆಗುಹೋಗುಗಳ ಮೇಲೆ ನಿಗಾ ಇಟ್ಟಿರುವ, ಸೂಕ್ತ ಸಮಯದಲ್ಲಿ ಸಹಾಯಕ್ಕೆ ಒದಗುವ ನಮ್ಮ ಸುತ್ತಲ ಸಮಾಜದ ಜೀವಿಗಳನ್ನು ಮತ್ತು ಅವರ ಸಹಾಯವನ್ನು, ಬೆಂಬಲವನ್ನು ನಿಜವಾಗಿ ಈ ಸಮಾಜಕ್ಕೆ ಉನ್ನತ ಕೊಡುಗೆಗಳನ್ನು ಕೊಟ್ಟ ದಾರ್ಶನಿಕರ, ವಿಜ್ಞಾನಿಗಳ, ಗುರುಗಳ, ಸಂತರ, ಸಾಮಾಜಿಕ ವ್ಯಕ್ತಿಗಳ ಅತಿ ದೊಡ್ಡ ಗುಂಪೇ ಇದೆ. ಆ ಎಲ್ಲರೂ ನಮ್ಮ ಬದುಕಿನ ಒಂದಲ್ಲ ಒಂದು ಗಳಿಗೆಯಲ್ಲಿ ನಮಗೆ ಸ್ಫೂರ್ತಿಯನ್ನು ತುಂಬಿದವರೇ. ಅಂತಹವರು ನಮಗೆ ಮಾದರಿಯಾಗಬೇಕು. ಅವರು ತೋರಿದ ಹಾದಿಯಲ್ಲಿ ನಾವು ಸಾಗಬೇಕು. ನಮ್ಮ ಆದರ್ಶ ಅವರುಗಳಾಗಬೇಕೇ, ಹೊರತು ಬೇರೆಯವರಲ್ಲ.

ಯಶ ಮದ, ಅಧಿಕಾರ ಮದ, ಧನ ಮದ, ಜಾತಿ ಮದ, ಧರ್ಮಾಂಧತೆಯನ್ನು ಹಾಸು ಹೊದ್ದಿರುವ ಯಾರೂ ಕೂಡ ನಮಗೆ ಆದರ್ಶವಲ್ಲ ಎಂಬುದನ್ನು ಅರಿತು ಮುಖ್ಯವಾಗಿ "ನಮ್ಮ ಅರಿವೇ ನಮಗೆ ಗುರು" ಎಂಬುದನ್ನು ನೆನಪಿನಲ್ಲಿಟ್ಟುಕೊಂಡು, ಸಭ್ಯ ಸುಸಂಸ್ಕೃತ ಸಮಾಜದ ನೀತಿ ನಿಯಮಾವಳಿಗಳನ್ನು ಅನುಸರಿಸಿ ಭವ್ಯ ಭಾರತದ ಪ್ರಜೆಗಳಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸೋಣ. ಭಾರತೀಯ ಸಂಸ್ಕೃತಿಯ ಕುಟುಂಬ ಪದ್ಧತಿಯ ಸನಾತನ ಬೇರುಗಳನ್ನು ಭದ್ರವಾಗಿಸೋಣ. ಏನಂತೀರಾ?

**ಕವಿ ಮನಸು**

## ಕಂಡವರಾರು ಹೇಳುವಿರಾ



ಮುತ್ತಿನ ಹನಿಗಳ ಎಲೆಗಳ ಮೇಲೆ
ತಂದಿಟ್ಟವನಾರು ಹೇಳುವಿರಾ
ಸೃಷ್ಟಿಯ ಸೊಬಗಿನ ಬಣ್ಣಗಳನ್ನು
ಹುಡುಕಿ ತಂದವನಾರು ಹೇಳುವಿರಾ

ಕಾಣದ ಲೋಕದಿ ಕುಳಿತಿಹ ಅವನನು
ಕಂಡವರಾರು ಹೇಳುವಿರಾ
ಯಾರಿಗೂ ಕಾಣದೇ ಏನನು ಬಯಸದ
ಗಾರುಡಿಗನ ನೀವು ಕಂಡಿರುವಿರಾ

ಕಾಡಿನ ಗಿಡ ಮರಕೆ ನೀರನು ಹಾಕಿದ
ವನಪಾಲಕನ ನೋಡಿರುವಿರಾ
ಬಗೆ ಬಗೆ ಹಣ್ಣಿನ ಗಿಡಗಳಿಗೆಲ್ಲ ಸಿಹಿಯನು
ಹಂಚಿದವನ ಕಂಡಿರುವಿರಾ

ಹೂವಿನ ತೋಟದಿ ಸುಮಗಳಿಗೆಲ್ಲ
ಸುವಾಸನೆ ಎರೆದವನ ಕಂಡಿಹಿರಾ
ವಿಧ ವಿಧ ಹೂಗಳಿಗೆ ಬಣ್ಣವ ತುಂಬಿದ
ಬಣಕಾರನ ನೀವು ಕಂಡಿದಿರಾ

– ಕೆ ಎಂ ಬಸವರಾಜ
ನಿವೃತ್ತ ಇಂಜನಿಯರ್, ಹೊಸಪೇಟೆ

# ಅತಿಥಿ ದೇವೋ ಭವ

ತೈತೀರಿಯಾ ಉಪನಿಷತ್ತಿನಲ್ಲಿ, ಪ್ರತಿಯೊಬ್ಬರಿಗೂ ತಿಳಿದಿರುವ ಒಂದು ಪ್ರಸಿದ್ಧ ಶ್ಲೋಕವಿದೆ. ಅದುವೇ,
"ಮಾತೃದೇವೋ ಭವ, ಪಿತೃದೇವೋ ಭವ
ಆಚಾರ್ಯದೇವೋ ಭವ, ಅತಿಥಿ ದೇವೋ ಭವ"
ಅಂದರೆ ತಂದೆ-ತಾಯಿ, ಒಂದಕ್ಷರ ಕಲಿಸಿದ, ತಿಳುವಳಿಕೆ ಮೂಡಿಸಿದ ಗುರುಪರಂಪರೆಯೇ, ಸಾಕ್ಷಾತ್ ದೇವರು, ದೇವರಿಗೆ ಸಮಾನವಾದವರು. ಅವರನ್ನು ಗೌರವಿಸುವುದು, ಖುಷಿಯಾಗಿ ಇರಿಸುವುದು ಪ್ರತಿಯೊಬ್ಬರ ಅಧ್ಯ ಜವಾಬ್ದಾರಿಯಾದಂತೆ, ಅದುವೇ ಭಾರತೀಯ ಜೀವನ, ಪರಂಪರೆಯ ಜೀವನ ಧರ್ಮ ಸಹ ಹೌದು.

ಅದರಂತೆ ನಮ್ಮ ಮನೆಗಳಿಗೆ ಅನಿರೀಕ್ಷಿತವಾಗಿ ಯಾರೇ ಬರಲಿ, "ಅತಿಥಿ ದೇವೋ ಭವ" ಎನ್ನುವಂತೆ, ಅವರನ್ನು ದೇವತಾ ರೂಪದಲ್ಲಿ, ದೈವ ಸಮಾನವಾಗಿ ಕಾಣುವುದು ಎಂಬುದಾಗಿದೆ. ಹೆಸರೇ ಸೂಚಿಸುವಂತೆ, ಅನಿರೀಕ್ಷಿತವಾಗಿ ಮನೆಗೆ ಆಗಮಿಸಿದ ಅಥವಾ ಮನೆಯ ಹತ್ತಿರ ಬಂದ ಅತಿಥಿ- ಅಭ್ಯಾಗತರನ್ನು ಮಾತನಾಡಿಸಿ, ದಣಿವಾರಿಸಿಕೊಳ್ಳಲು ನೀರು, ಅಗತ್ಯವಾದರೆ ಊಟ ನೀಡುವುದು ಸಹ, ಮಾನವೀಯತೆಯ ದೃಷ್ಟಿಯಿಂದ ಧರ್ಮ, ಕರ್ತವ್ಯಗಳಲ್ಲಿ ಪ್ರಮುಖವಾದುದು.



ಲೀಲಾವತಿ ಶಿವನಗೌಡ್ರ,
ಅಂಕಸಮುದ್ರ, ಹ.ಬೊ.ಹಳ್ಳಿ

Hampi Times E-paper
SCAN AND READ

ವೇದೋಕ್ತಿ ಒಂದಿದೆ,
"ಯತ್ರಾತಿಥಿನಾಂ ಸೇವನಂ,
ಯಥಾವತ್ ಕ್ರಿಯತೇ।
ತತ್ರ ಸರ್ವಾಣಿ ಸುಖಾನಿ
ಭವಂತಿತಿಃ॥"

ಎಲ್ಲಿ ಅತಿಥಿಗಳನ್ನು ಯಥಾವತ್ತಾಗಿ ಅಂದರೆ, ಶಾಸ್ತ್ರದಲ್ಲಿ ಹೇಳಿರುವಂತೆ ಮನಸ್ಸಿನಿಂದ, ಮಾತಿನಿಂದ ಯಾವುದೇ ಲೋಪವಾಗದಂತೆ( ಹೊರಗೊಂದು, ಒಳಗೊಂದು ಆಲೋಚನೆ ಮಾಡದೇ)ಆತಿಥ್ಯ ಸತ್ಕಾರ ಮಾಡಬೇಕು. ಅವರಿಂದ ಅತಿಥಿಗಳು ಸಂತಸಗೊಂಡರೆ, ದೇವತೆಗಳಿಂದ ಆಶೀರ್ವದಿ ಸಲ್ಪಡುವರು. ಇದರಿಂದ ಅತಿಥೇಯರಿಗೆ ಎಲ್ಲಾ ರೀತಿಯ ಸುಖಗಳು ಉಂಟಾಗುವುದು. ನಿಜ ಅಲ್ಲವೆ!! ಅತಿಥಿಗಳಿಗೆ ಅಥವಾ ಬಿಸಿಲಲ್ಲಿ ದಣಿದು ಬಂದವರಿಗೆ ನೀರು- ಮಜ್ಜಿಗೆ ಕೊಟ್ಟರೇ ಮನದುಂಬಿ ಹೇಳುವ "ತಂಪಾತು, ನಿಮ್ಮ ಹೊಟ್ಟೆ



ತಣ್ಣಗಿರ್ಲಿ" ಎಂಬ ಮಾತೇ ಆಶೀರ್ವಾದವಾಗುವುದಲ್ಲವೇ!! ಅದರಂತೆ, ಭಕ್ತ ಸಿರಿಯಾಳನ ತಂದೆ-ತಾಯಿಯ ಅತಿಥಿ ಸತ್ಕಾರವನ್ನು , ದ್ವಾರಕಾಧಿಪತಿ ಕೃಷ್ಣ ತನ್ನ ಸ್ನೇಹಿತ ಸುಧಾಮನಿಗೆ ತೋರಿದ ಸತ್ಕಾರ ನಾವು ನೆನೆಯಬಹುದು.

ಅಂದರಂತೆ, ಪ್ರಾಚೀನ ಭಾರತದಲ್ಲಿ, ಈ "ಅತಿಥಿ ದೇವೋ ಭವ" ಕೇವಲ ಉಪನಿಷತ್ತಿನ ಉಕ್ತಿ ಆಗಿರಲಿಲ್ಲ. ಅದು ತನ್ನ ಭೂಮಿಗೆ ಬರುವ ಪ್ರತಿಯೊಬ್ಬರನ್ನು ಆಧರಿಸಿ ಗೌರವಿಸುತ್ತಿತ್ತು. ಅವರ ವಿದ್ಯಾಭ್ಯಾಸ-ಅಧ್ಯಯನಕ್ಕೆ ಸಹಕಾರ ನೀಡುತ್ತಿತ್ತು. ಹಾಗಾಗಿಯೇ ಉತ್ಕೃಷ್ಟ ಗುಣಮಟ್ಟದ ವಿದ್ಯೆ- ಸಂಶೋಧನೆಗೆ ಹೆಸರಾಗಿದ್ದ ನಳಂದ, ತಕ್ಷಶಿಲಾ, ವಿಕ್ರಮಶಿಲಾದಂತಹ ಭಾರತೀಯ ಪ್ರಾಚೀನ ವಿಶ್ವವಿದ್ಯಾಲಯಗಳು, ಸಾವಿರಾರು ವಿದೇಶಿ ಯಾತ್ರಿಕರನ್ನು, ವಿದೇಶಿ ವಿದ್ಯಾರ್ಥಿಗಳನ್ನುವಿದ್ಯೆಗಾಗಿ,ಸಂಶೋಧನೆಗಾಗಿತನ್ನೆಡೆಗೆಬರಮಾಡಿಕೊಂಡಿತ್ತು, ಎಂದರೂ ಅತಿಶಯವಲ್ಲ. ಹೀಗಾಗಿಯೇ ಮೇಗಸ್ತಾನಿಸ್, ಹ್ಯೂಯನ್ ತ್ಸಾಂಗ್, ಸಿಯುಕಿ, ಫಾಯಿಯಾನ, ಆಲ್ ಬೆರೋನಿ ಇತ್ಯಾದಿ ವಿದೇಶಿ ಯಾತ್ರಿಕರು, ಭಾರತದಲ್ಲಿ ವರ್ಷಗಟ್ಟಲೇ ಇದ್ದು, ತಮ್ಮ ಸಂಶೋಧನೆಗಳನ್ನು ಬರೆದು, ತಮ್ಮ ಅಭಿಪ್ರಾಯ, ಜನಜೀವನ, ಆಗಿನ ಆರ್ಥಿಕ ವ್ಯವಸ್ಥೆ ಬಗ್ಗೆ ದಾಖಲಿಸಿದ್ದಾರೆ. ಇದಕ್ಕೆ ಕಾರಣವೆಂದರೆ, ಇಲ್ಲಿನ ರಾಜರು ಅವರಿಗೆ ತೋರಿಸಿದ್ದ ಅತಿಥಿ ಸತ್ಕಾರ, ಸಲ್ಲಿಸುತ್ತಿದ್ದ ಗೌರವ ಎಂದರೆ ತಪ್ಪಾಗಲಾರದು.

ಸ್ವಲ್ಪ ಹಿಂದಿನ ಸಮಯದಲ್ಲಿ, ಅಡುಗೆ ಮಾಡುವಾಗ ಸ್ವಲ್ಪ ಹೆಚ್ಚಿಗೆ ಅಡುಗೆ ಮಾಡಿರುತ್ತಿದ್ದರು. ಕಾರಣ ಅತಿಥಿಗಳು ಇದೇ ಸಮಯ ಬರುವರೆಂದು ಹೇಳಲಾಗದು. ಬಂದರೆ ಊಟ ಮಾಡದೇ ಹಾಗೆಯೇ ಹಿಂತಿರುಗಬಾರದೆಂದು. ಹಾಗೆಯೇ ಹೊರಗೆ ಕಟ್ಟೆಗೆ ಕೂತ ಹಿರಿಯರು, ತಮ್ಮ ಮನೆಗೆ ಯಾರೇ ಹೊಸಬರು ಬಂದರೆ ವಿಚಾರಿಸಿ, ದಣಿವಾರಿಸಿಕೊಳ್ಳಲು ಪಾನಕ ಇತ್ಯಾದಿ ಕೊಡುವ ಕ್ರಮವಿತ್ತು. ಅಥವಾ ಊರ ಅರಳಿಕಟ್ಟೆ, ಪೌಳಿ ಕಟ್ಟೆಗೆ ಕೂತ ಹಿರಿಯರು, ತಮ್ಮೂರಿಗೆ ಅಪರಿಚಿತರು ಯಾರೇ ಬರಲಿ ಯಾವ ಊರು, ಯಾವ ಕೆಲಸಕ್ಕಾಗಿ ಬಂದವರೆಂದು ವಿಚಾರಿಸುವುದಿದೆ. ಈಗಲೂ ಹಳ್ಳಿಗಳಲ್ಲಿ ವೇಷಗಾರರು, ವ್ಯಾಪಾರಿಗಳು ಮನೆ ಬಾಗಿಲಿಗೆ ಬಂದರೆ ತಮ್ಮ ಕೈಲಾದಷ್ಟು ಧಾನ್ಯ, ಹಣ ಕೊಟ್ಟುಕಳಿಸುವುದು ರೂಢಿ.

ಅದರಂತೆ ಹಿಂದೆಲ್ಲಾ ಯಾತ್ರಾರ್ಥಿಗಳು ಉಳಿಯಲು, ಊಟ ಮಾಡಲು ಅಲ್ಲಲ್ಲಿ ಧರ್ಮಶಾಲೆ/ಧರ್ಮಛತ್ರಗಳಿದ್ದವು. ಅಲ್ಲಿಗೆ ಯಾತ್ರಾರ್ಥಿಗಳಾಗಿ ಬರುವ ಅತಿಥಿಗಳಿಗೆ ಬೇಕಾದುದನ್ನು ಒದಗಿಸುವುದು ಆ ಊರವರ ಜವಾಬ್ದಾರಿ ಸಹ ಆಗಿತ್ತು. ಜೊತೆಗೆ ಆಗಿನ ಕಾಲದಲ್ಲಿ "ವಾರಾನ್ನ ಪದ್ಧತಿ"ಯೂ ಇತ್ತು. ಕಾರಣ, ಆಗ ಈಗಿನಂತೆ ಪ್ರತಿ ಊರಲ್ಲಿ ಶಾಲೆಗಳು ಇರಲಿಲ್ಲ, ಇದ್ದರೂ ಪ್ರೌಢಶಾಲಾ ಹಂತಕ್ಕೆ ಪರ ಊರಿಗೆ ಹೋಗಬೇಕಿತ್ತು. ಬಸ್ ವ್ಯವಸ್ಥೆ ಇರದೇ, ದಿನಾ ನಡೆದಾಡಲು ಆಗದೇ, ಅನಿವಾರ್ಯವಾಗಿ ಬೇರೆಯವರ ಮನೆ, ಪರವೂರಿನಲ್ಲಿ ನಿಲ್ಲಬೇಕಿತ್ತು. ಆಗ ವಿದ್ಯಾರ್ಥಿಗಳು ಪ್ರತಿ ದಿನ, ಒಬ್ಬೊಬ್ಬರ ಮನೆಯಲ್ಲಿ ಊಟ ಮಾಡುವ ಪದ್ಧತಿಯಿತ್ತು. ಅಲ್ಲಿ ಅತಿಥಿ-ಅತಿಥೇಯರಿಬ್ಬರಿಗೂ ಮೇಲಿರಿಮೆ-ಕೀಳಿರಿಮೆಯಂತಹ ಭಾವನೆಗಳಿರಲಿಲ್ಲ,'ಇವರೂ ತಮ್ಮ ಮನೆಯ ಸದಸ್ಯರು' ಎಂಬ ಭಾವನೆಯಿಂದಲೇ ಕಾಣುತ್ತಿದ್ದರಿಂದ, ಅದೇ ರೀತಿ ನಡೆದುಕೊಳುತ್ತಿದ್ದರಿಂದ. ಮುಖ್ಯವಾಗಿ 'ನಂಬಿಕೆ' ಇದ್ದರಿಂದಲೇ, ಈ ಪರಂಪರೆ ಬಹು ಕಾಲದವರೆಗೂ ನಡೆದು ಬಂದಿತ್ತು. ಆದರೀಗ ಕಾಲ ಸರಿದಂತೆ, ಹಲವು ಕಾರಣಗಳಿಂದ, ಆಗಿನ ಶಿಕ್ಷಣ ಬದಲಾಗಿ, ಆ ವಾರಾನ್ನ ವ್ಯವಸ್ಥೆ ಕೇವಲ ಪುಸ್ತಕದಲ್ಲಿ ಓದಲು ಮಾತ್ರ ಸಿಗುವುದು. ಜೊತೆಗೆ ಕುಸಿಯುತ್ತಿರುವ ನಂಬಿಕೆ, ಮತ್ತೊಂದೆಡೆ ಬಿಗುಮಾನಗಳು ಯಾರನ್ನು ಯಾರೊಂದಿಗೂ ಸುಲಭಕ್ಕೆ ಮಾತನಾಡಲು ಬಿಡುವುದಿಲ್ಲ. ಈಗೀಗ ಕೆಲವೆಡೆ ಮನೆಗೆ ಬಂದವರನ್ನು ಸಹ, ಸಂಬಂಧಿಸಿದವರಷ್ಟೇ ಮಾತನಾಡಿಸುವ ಸ್ಥಿತಿ ಬಂದಿರುವುದು ವಿಷಾದವೇ!!

ಸನಾತನ ಭಾರತದ ಮೌಲ್ಯವೇ ಆಗಿರುವ"ಅತಿಥಿ ದೇವೋ ಭವ" ಉಕ್ತಿಯು, ಈಗ ಭಾರತ ಸರ್ಕಾರದ, ಪ್ರವಾಸೋದ್ಯಮ ಇಲಾಖೆಯ ಘೋಷವಾಕ್ಯವಾಗಿದೆ. ಅದರಂತೆ ನಾವು ಇಲ್ಲಿಗೆ ಅತಿಥಿಗಳಾಗಿ ಬರುವ ಪ್ರವಾಸಿಗರನ್ನು ಸತ್ಕಾರ ಮಾಡುತ್ತೇವೆಯೇ? ಅಥವಾ ಸುಲಿಗೆ ಮಾಡುತ್ತೇವೆಂಬುದು ನಮಗೆ ಅರಿವಾಗಬೇಕಷ್ಟೇ. ನಮ್ಮ ಮಣ್ಣಿನ ಗುಣಧರ್ಮವೇ ಆಗಿರುವ, "ಅತಿಥಿದೇವೋ ಭವ" ಉಕ್ತಿಯನ್ನು ಅತಿಥೇಯರಷ್ಟರೇ ಪಾಲಿಸದೇ, ಅದರ ಮೂಲ ಗುಣವನ್ನು ಅತಿಥಿ-ಅತಿಥೇಯರಿಬ್ಬರಿಗೂ ಗ್ರಹಿಸಿದಾಗಲೇ ಸಾರ್ಥಕತೆ ಪಡೆಯುವುದು.

## ಇರಬೇಕಯ್ಯ ಒಳ್ಳೆಯ ಬುದ್ಧಿ

ಮನುಷ್ಯನಾದವನಿಗೆ ಇರಬೇಕಯ್ಯ ಒಳ್ಳೆಯ ಬುದ್ಧಿ
ನಾನು ಎನ್ನುವುದನ್ನು ತೊರೆದರೆ ಆದಿತ್ತು ಅಂತರಂಗ ಶುದ್ಧಿ
ಬುದ್ಧಿಯ ಶುದ್ಧಿ ಮಾಡುವುದು
ಅಂತಃಪ್ರಜ್ಞೆಯ ವೃದ್ಧಿ
ಅತ್ಯುನ್ನತ ರೂಪ ಆಧ್ಯಾತ್ಮಿಕ ಸಾಧನೆ
ಪರಿಪೂರ್ಣ ಸಿದ್ಧಿ.

– ಮಂಜುಶ್ರೀ ಮುರಳೀಧರ್.

# ಹೊಸಪೇಟೆ ಸಿದ್ಧಿ ವಿನಾಯಕ ದೇವಸ್ಥಾನದ 25ನೇ ವಾರ್ಷಿಕೋತ್ಸವ ಅದ್ದೂರಿ
# ಕಮಲಾಕ್ಷ ಶಾನಭಾಗ ಕುಟುಂಬದಿಂದ ರಜತ ಪ್ರಭಾವಳಿ ಅರ್ಪಣೆ





■ **ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಹೃದಯಭಾಗದಲ್ಲಿರುವ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನ ಸಮಿತಿ ದೇವಸ್ಥಾನದ 25ನೇ ವಾರ್ಷಿಕೋತ್ಸವದ ನಿಮಿತ್ತ ಹಮ್ಮಿಕೊಂಡಿದ್ದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಗುರುವಾರ ಭಕ್ತರ ಸಮ್ಮುಖದಲ್ಲಿ ಪೂರ್ಣಾಹುತಿಯೊಂದಿಗೆ ವಿಜೃಂಭಣೆಯಿಂದ ಜರುಗಿದವು.

ದೇವಸ್ಥಾನದ ರಜತ ಮಹೋತ್ಸವದಂಗವಾಗಿ ಬೇಳೂರು ಕಮಲಾಕ್ಷ ಶಾನಭಾಗ ಮತ್ತು ಮಕ್ಕಳು ಶ್ರೀ ಸಿದ್ಧಿ ವಿನಾಯಕನಿಗೆ ಬೆಳ್ಳಿ ಪ್ರಭಾವಳಿ ಸಮರ್ಪಿಸಿ, ಗಣಹೋಮ, ಪೂಣ್ಯಾವಾಚನ, ಧ್ವಜಾರೋಹಣ, ಕುಂಭಾಭಿಷೇಕ, ಸಹಸ್ರ ಮೋದಕ ಹೋಮ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಕುಟುಂಬ ಸಮೇತರಾಗಿ ಭಾಗವಹಿಸಿ ಪೂಜೆ ಸಲ್ಲಿಸಿದರು. ಅರ್ಚಕರು ಪೂಜಾಕೈಂಕರ್ಯಗಳನ್ನುನೆರವೇರಿಸಿದರು. ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ವೈ. ರಾಘವೇಂದ್ರಶೆಟ್ಟಿ, ಪ್ರಧಾನ ಕಾರ್ಯದರ್ಶಿ ಪ್ರಹ್ಲಾದ್ ಭೂಪಾಳ ಸೇರಿದಂತೆ ಸಮಿತಿ ಪದಾಧಿಕಾರಿಗಳು ವಿಶೇಷ ಪೂಜೆ, ಅನ್ನಸಂತರ್ಪಣೆಗೈದರು.

ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ದೇವಸ್ಥಾನಕ್ಕೆ ಆಗಮಿಸಿ ಭಕ್ತರಿಗೆ ಆಶೀರ್ವದಿಸಿದರು. ನಗರ ಸೇರಿದಂತೆ ವಿವಿಧೆಡೆಗಳಿಂದ ಭಕ್ತರು ಆಗಮಿಸಿ ಪೂಜೆಯಲ್ಲಿ ಭಾಗವಹಿಸಿ, ಭಕ್ತಿ ಸೇವೆ ಸಲ್ಲಿಸಿದರು.

# ಅಸೂಹೆ

ಮನದೊಳಗಣ ಕಿಚ್ಚು ಮನೆಯ ಸುಟ್ಟಲ್ಲದೇ
ನೆರೆಮನೆಯ ಸುಡದೋ
ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ
ತನಗಾದ ಆಗೇನು ಅವರಿಗಾದ ಕೇಡೇನು (ಛೇಗೇನು)
ತನುವಿನ ಕೋಪ ತನ್ನ ಹಿರಿಯತನದ ಕೇಡು
ಮನದ ಕೋಪ ತನ್ನರಿವಿನ ಕೇಡು
ಕೂಡಲಸಂಗಮದೇವ

ಎಂಬ ಬಸವಣ್ಣನವರ ವಚನದಂತೆ ಮನದಲ್ಲಿ ಮೂಡುವ ಇತರರ ಬಗೆಗಿನ ದ್ವೇಷ ಅಸೂಯೆಯು ಕಿಚ್ಚಿನಂತೆ ನಮ್ಮದೇ ದೇಹ ಮನಸ್ಸನ್ನು ನಿಧಾನವಾಗಿ ಸುಟ್ಟು ಹಾಕುತ್ತದೆ. ಭರತನ ಪರ ನಿಂತ ಮಂಥರೆ ಅಸೂಯೆಯನ್ನು ಕೈಕೆಯಲ್ಲಿ ಬಿತ್ತಿ ರಾಮನ ವನವಾಸಕ್ಕೆ ಹಾಗೂ ದಶರಥನ ಶೋಕಮರಣಕ್ಕೆ ಕಾರಣಳಾದಳು. ಪಾಂಡವರ ಬಗ್ಗೆ ದ್ವೇಷ ಅಸೂಯೆ ಕೌರವರಲ್ಲಿ ದೃತರಾಷ್ಟ್ರಾಧಿಯಾಗಿ ಎಲ್ಲರ ಪತನಕ್ಕೆ ಕಾರಣವಾಯಿತು. ಇತಿಹಾಸದಲ್ಲಂತೂ ಪರರ ಏಳಿಗೆ ಸಹಿಸದೆ ಯುದ್ಧಗಳೇ ಆಗಿ ರಾಜ ವಂಶಗಳೇ ಅಳಿದು ಹೋದ ನಿದರ್ಶನ ಕಥೆಗಳು ಬೇಕಾದಷ್ಟಿದೆ.
ಅಸೂಯೆ ನಿಧಾನಕ್ಕೆ ಬಲಿ ತೆಗೆದುಕೊಳ್ಳುವ ವಿಷವಿದ್ದಂತೆ. ನಮ್ಮ ದೇಹ ಮನಸ್ಸುಗಳನ್ನು ಮುದುಡಿ ಹಾಕುತ್ತದೆ. ಮನದಲ್ಲಿ ಪರರ ಏಳಿಗೆ ಒಳಿತಾಗುವುದನ್ನು ಸಂತಸ ಪಡುವ ಮನಸ್ಥಿತಿ ನಮಗೆ ಮೂಡಬೇಕು. ಅಸೂಯೆಯನ್ನು ಅದರ ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕು. ನಮ್ಮ ಪಾಲಿಗೆ ಬಂದಷ್ಟನ್ನು ಅನುಭವಿಸುತ್ತಾ, ನಮ್ಮ ಸ್ವಪ್ರಯತ್ನದ ಬಲದಿಂದ ಮೇಲೆ ಬರುವ ಛಾತಿ ನಮ್ಮದಾಗಬೇಕು. ಅಸೂಯೆ ನಮ್ಮನ್ನು ಕೆಳಗೆ ತಳ್ಳುತ್ತದೆ. ಆದರೆ ಆತ್ಮಭಿಮಾನ ಸಾಧನೆ ಸ್ವಪ್ರಯತ್ನ ನಮ್ಮನ್ನು ಅಸೂಯೆ ದ್ವೇಷವನ್ನು ಮೀರಿ ಬೆಳೆದು ಔನ್ನತ್ಯವನ್ನು ಸಾಧಿಸುವತ್ತಾ ನಮ್ಮನ್ನು ಅಣಿ ಮಾಡುತ್ತದೆ.

ಅಸೂಯೆ ಅಳಿಯಲಿ
ಆತ್ಮ ಅಭಿಮಾನ ಮೊಳೆಯಲಿ
ಅನವರತ ಸಾಧನೆ ನಮ್ಮದಾಗಲಿ

–ಚೇತನ ಭಾರ್ಗವ, ಬೆಂಗಳೂರು

# ಬಕ್ರಿದ್ ಹಬ್ಬ: ಶಾಂತಿ ಸೌಹಾರ್ದಯುತವಾಗಿ ಆಚರಿಸಿ
## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಸಲಹೆ

■ **ಹಂಪಿ ಟೈಮ್ಸ್ ಹೊಸಪೇಟೆ**
ಜೂನ್ 17ರಂದು ನಡೆಯಲಿರುವ ಬಕ್ರಿದ್ ಹಬ್ಬದ ಆಚರಣೆ ಹಿನ್ನೆಲೆಯಲ್ಲಿ ಶಾಂತಿ ಸಭೆಯು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿ ಬಾಬು ಅವರ ಸಮ್ಮುಖದಲ್ಲಿ ಜೂನ್ 13ರಂದು ನಡೆಯಿತು.
ಜಿಲ್ಲಾಡಳಿತ ಭವನದಲ್ಲಿನ ಆಡಿಟೋರಿಯಂ ಹಾಲ್‌ನಲ್ಲಿ ನಡೆದ ಶಾಂತಿ ಸಭೆಯಲ್ಲಿ ಮುಸ್ಲಿಂ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಹಲವಾರು ಸಲಹೆಗಳನ್ನು ನೀಡಿದರು.

ಬಕ್ರಿದ್ ಹಿನ್ನೆಲೆಯಲ್ಲಿ ಈದ್ಗಾ ಮೈದಾನವನ್ನು ಶುಚಿಗೊಳಿಸಬೇಕು. ಅಲ್ಲಿ ಕುಡಿಯುವ ನೀರು, ವಿದ್ಯುತ್ ಪೂರೈಕೆ ಸೇರಿದಂತೆ ಮೂಲಭೂತ ಸೌಕರ್ಯ ಕಲ್ಪಿಸಬೇಕು. ಮುಸಲ್ಮಾನ ಬಂಧುಗಳು ಅಂದು ಶಾಂತಿಯುತವಾಗಿ ಪ್ರಾರ್ಥನೆ ಸಲ್ಲಿಸಿ ಸಹಕರಿಸಬೇಕು ಎಂದು ಅಂಜುಮನ್ ಸಮಿತಿಯ ಅಧ್ಯಕ್ಷರಾದ ಇಮಾನ್ ನಿಯಾಜ್ ಮತ್ತು ಹಿರಿಯ ಮುಖಂಡರಾದ ಬಡಾವಲಿ ಅವರು ಕೋರಿದರು.

ಬಕ್ರಿದ್ ಹಬ್ಬವು ಇದುವರೆಗೆ ವಿಜಯನಗರ ಜಿಲ್ಲೆಯಲ್ಲಿ ಶಾಂತಿಯುತವಾಗಿ ನಡೆದಿದೆ. ಹೆದ್ದಾರಿಯಲ್ಲಿ ಈದ್ಗಾ ಮೈದಾನ ಇರುವುದರಿಂದ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಬೇಕು ಎಂದು ಶಿವಪ್ಪನಾಯಕ ಕೂಡ್ಲಿಗಿ ಅವರು ಸಲಹೆ ಮಾಡಿದರು. ಇದುವರೆಗೆ ಜಿಲ್ಲೆಯಲ್ಲಿ ನಾವೆಲ್ಲರೂ ಸೇರಿ ಎಲ್ಲಾ ಹಬ್ಬಗಳನ್ನು




ಸೌಹಾರ್ದಯುತವಾಗಿ ಆಚರಣೆ ಮಾಡಿದ್ದೇವೆ. ಯಾವುದೇ ಅವಘಡಗಳಿಗೆ ಅವಕಾಶವಿರದ ಹಾಗೆ ಶಾಂತಿಯುತವಾಗಿ ಹಬ್ಬ ಆಚರಣೆ ಮಾಡುತ್ತೇವೆ ಎಂದು ಕಮಲಾಪುರದ ಮೆಹಬೂಬ ಪಾಷ ಅವರು ತಿಳಿಸಿದರು.

ಕೊಟ್ಟೂರಿನಲ್ಲಿ ಅಲ್ಲಿನ ಸ್ಥಳೀಯ ಆಡಳಿತ ಗಮನ ಹರಿಸಿ ಪ್ರಾರ್ಥನಾ ಮಂದಿರದ ರಸ್ತೆಗಳನ್ನು ಸರಿಪಡಿಸಿಕೊಡಬೇಕು ಎಂದು ಅಲ್ಲಿನ ಮುಖಂಡರು ಮನವಿ ಮಾಡಿದರು.

ಸಾರ್ವಜನಿಕರ ಸಲಹೆಗಳನ್ನು ಆಲಿಸಿದ ಬಳಿಕ ಮಾತನಾಡಿದ ಜಿಲ್ಲಾಧಿಕಾರಿಗಳು, ಬಕ್ರಿದ್ ಹಬ್ಬದ ಸಂದರ್ಭದಲ್ಲಿ ಕುಡಿಯುವ ನೀರು, ವಿದ್ಯುತ್ ಪೂರೈಕೆ ಸೇರಿದಂತೆ ಜಿಲ್ಲಾಡಳಿತದಿಂದ ಎಲ್ಲಾ ರೀತಿಯ ಅಗತ್ಯ ಸಹಕಾರ ನೀಡಲಾಗುವುದು. ಸಭೆಯಲ್ಲಿ ವಿವಿಧ ಮುಖಂಡರು ನೀಡಿದ ಸಲಹೆಯಂತೆ ಎಲ್ಲಾ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಹಬ್ಬದ ದಿನ ಮಳೆಯಾದಲ್ಲಿ ಸೂಕ್ತವಾದ ವ್ಯವಸ್ಥೆ ಮಾಡಬೇಕು. ಸಭೆಯಲ್ಲಿ ನಿರ್ದೇಶನ ನೀಡಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ನಾನಾ ವ್ಯವಸ್ಥೆಗಳನ್ನು ಕಲ್ಪಿಸಲು ಕಾರ್ಯಪ್ರವೃತ್ತರಾಗಬೇಕು. ಇಲ್ಲದಿದ್ದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮಾತನಾಡಿ, ಬಕ್ರಿದ್ ಹಬ್ಬದ ಹಿನ್ನೆಲೆಯಲ್ಲಿ ಈಗಾಗಲೇ ತಾಲೂಕುಮಟ್ಟದಲ್ಲಿ ಹಾಗೂ ಠಾಣಾ ಮಟ್ಟದದಲ್ಲಿ ಶಾಂತಿ ಸಭೆಗಳು ನಡೆಯುತ್ತಿವೆ. ಶಾಂತಯುತವಾಗಿ ಹಬ್ಬ ನಡೆಯುವಂತೆ ಜಿಲ್ಲೆಯ ಸಾರ್ವಜನಿಕರು ಜಿಲ್ಲಾ ಪೊಲೀಸ್ ಇಲಾಖೆ ಮತ್ತು ಜಿಲ್ಲಾಡಳಿತಕ್ಕೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

16-18 ವಯಸ್ಸಿನೊಳಗಿನ ಕೆಲವು ಯುವಕರು ಸಾಮಾಜಿಕ ಜಾಲತಾಣಗಳಲ್ಲಿ ಇಲ್ಲಸಲ್ಲದ ವಿಷಯಗಳನ್ನು ಹರಿಬಿಟ್ಟು ಅದರಿಂದ ಅವಘಡಗಳು ಸಂಭವಿಸುತ್ತವೆ. ಯಾವುದೇ ಧರ್ಮದ ಯುವಕರಿರಲಿ ಅಂತವರಿಗೆ ಹಿರಿಯ ನಾಗರಿಕರು ತಿಳಿ ಹೇಳಬೇಕು. ಶಾಂತಿ ಕದಡದ ಹಾಗೆ ಅವರಿಗೆ ಎಚ್ಚರಿಕೆ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ., ಸಹಾಯಕ ಆಯುಕ್ತರಾದ ಮೊಹಮ್ಮದ್ ಅಲಿ ಅಕ್ರಮ ಷಾಹ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಶಾ ಸೇರಿದಂತೆ ಪೊಲೀಸ್ ಇಲಾಖೆಯ ಇನ್ನಿತರ ಅಧಿಕಾರಿಗಳು ಮತ್ತು ವಿವಿಧ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

# ತೊಗರಿ ಬೆಳೆಯಲ್ಲಿ ಇಳುವರಿ ಹೆಚ್ಚಿಸುವ ಬಗ್ಗೆ ಕೃಷಿ ಇಲಾಖೆಯಿಂದ ಸಲಹೆಗಳು

■ **ಹಂಪಿ ಟೈಮ್ಸ್ ಕೊಪ್ಪಳ**
ತೊಗರಿ ಬೆಳೆಯುವ ರೈತರು ಕೆಲವು ಉತ್ಪಾದನಾ ತಾಂತ್ರಿಕತೆಗಳನ್ನು ಕೃಷಿಯಲ್ಲಿ ಅಳವಡಿಸಿಕೊಂಡರೆ ಹೆಚ್ಚಿನ ಇಳುವರಿ ಪಡೆಯಲು ಸಹಾಯಕವಾಗುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ ತಿಳಿಸಿದ್ದಾರೆ.
ಅಧಿಕ ಇಳುವರಿ ನೀಡುವ ಬೆಳೆಯ ತಳಿಗಳಾದ GRG 152 ಗಳಂತಹ ತಳಿಗಳನ್ನು ಬಿತ್ತನೆ ಮಾಡಬೇಕು. ತೊಗರಿ ಬೆಳೆಗೆ ಇಳುವರಿ ಹೆಚ್ಚಿಸಲು ರೈತರು ಬಿತ್ತನೆಗೆ ಮುಂಚಿತವಾಗಿ ಬೀಜಗಳಲ್ಲಿ ಬರ ನಿರೋಧಕತೆ ಹೆಚ್ಚಿಸಲು ಬೀಜಗಳನ್ನು ಶೇ.2 ರಷ್ಟು ಕ್ಲೋರೈಡ್ ದ್ರಾವಣದಲ್ಲಿ ಒಂದು ತಾಸು ನೆನೆಸಿ, ನಂತರ ನೆರಳಿನಲ್ಲಿ ಕನಿಷ್ಠ 7 ತಾಸು ಒಣಗಿಸಬೇಕು. ನಂತರ ಪ್ರತಿ ಕೆ.ಗ್ರಾಂ. ಬೀಜಕ್ಕೆ 3 ಗ್ರಾಂ. ಶಿಲೀಂಧ್ರ ಮಿಶ್ರಣವಾದ ಕಾರ್ಬಂಡೀಜಿಯಂ, ಮ್ಯಾಂಕೋಜೆಬ್ ಅಥವಾ ಜೈವಿಕ ಗೊಬ್ಬರವಾದ ಟ್ರೈಕೊಡರ್ಮ, ರೈಜೋಬಿಯಂಗಳಿಂದ ಬೀಜೋಪಚಾರ ಮಾಡಿಕೊಳ್ಳಬೇಕು. ಯಾಂತ್ರೀಕೃತ ಬಿತ್ತನೆಯನ್ವಯ 90/30 ಸೆಂ.ಮೀ. ನಲ್ಲಿ ಬೆಳೆ ಅಂತರ ಕಾಪಾಡಬೇಕು. ಮಧ್ಯಮ ಅವಧಿ ತಳಿಗಳಿಗೆ 150/20 ಸೆಂ.ಮೀ. ದೀರ್ಘಾವಧಿ ತಳಿಗಳಿಗೆ 180/30 ಅಂತರದಲ್ಲಿ ಬಿತ್ತನೆ ಮಾಡಬೇಕು. ಹೆಚ್ಚಿನ ಸಸಿಗಳನ್ನು ಕಿತ್ತು ಹಾಕಬೇಕು. ಬೆಳವಣಿಗೆ ಹಂತದಲ್ಲಿ ಅಂದರೆ ಬೆಳೆಯ 45-55 ನೇ ದಿನಗಳಲ್ಲಿ ತಪ್ಪದೆ ಕುಡಿ ಚಿವುಟುವುದರಿಂದ ಹೆಚ್ಚಿನ ಪ್ರಮಾಣದ ಇಳುವರಿ ಪಡೆಯಲು ಸಹಾಯಕವಾಗುತ್ತದೆ ಎಂದು ತಿಳಿಸಿದ್ದಾರೆ.

ಹಂಪಿ ಟೈಮ್ಸ್
HAMPI TIMES




ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
9448633038,
Email:hampitimes@gmail.com

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**14–06–2024 – ಶುಕ್ರವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರ ಪಾಲ್ಗುಣ |
| ಯೋಗ | : ಸಿದ್ಧಿ |
| ಕರಣ | : ವಿಷ್ಟಿ |
| ಸೂರ್ಯೋದಯ | : 05:42:09 |
| ಸೂರ್ಯಾಸ್ತ | : 19:12:34 |
| ರಾಹು | : 10:46–12:27 |
| ಯಮಘಂಡ | : 15:50–17:31 |
| ಗುಳಿಕ | : 07:23–09:05 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 13–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.13 ಅಡಿ |
| ಒಳ ಹರಿವು | 3533 ಕ್ಯುಸೆಕ್ |
| ಹೊರ ಹರಿವು | 10 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.590 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1581.10 ಅಡಿ |
| ಒಳ ಹರಿವು | 405 ಕ್ಯುಸೆಕ್ |
| ಹೊರ ಹರಿವು | 246 ಕ್ಯುಸೆಕ್ |
| ಸಾಮರ್ಥ್ಯ | 5.029 ಟಿಎಂಸಿ |

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No. 524/2024**

Between: **Smt. Mahadevi wife of late Thayappa D/o Thimmappa,** aged about 34 years, Hindu, R/o Gudekote Village in Kudligi Taluk, Vijayanagara District. ...Petitioner

And

**The Tahasildar Kudligi** ...Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased husband by name Thayappa son of Kumarappa was died on 20/08/2016 at Gudekote Village in Kudligi Taluk, Vijayanagara District on the file of the civil Judge & JMFC at Kudligi, the Tahasildar Kudligi is the respondent. The interested persons are hereby summoned to appear in this court in person. or by pleader duly instructed and able to answer all material question relating to the above petition on 14-6-2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 29-5-2024

By Order of the court
Chief Ministerial Court Officer judge (J.D)
Court kudligi

**Govinda Reddy Advocate, Kudligi**

**IN THE COURT OF THE ADDL. CIVIL JUDGE AND JMFC AT HOSAPETE**
**Cri M.C.No.38/2024**

**Mahariyamma and others** ...**Petitioners**

Versus

Commissioner Cum Registrar of Birth and Death, C.M.C Hosapete ...Respondent

**To, Whom so ever it may concern,**

WHEREAS the above name Mahariyamma and Others of Venkay camp T.B. Dam Hosapete Hosapete taluk filed the above petition under section 13(3) of birth and death registration Act for obtaining death certificate mother in law of Mahariyamma and grandmother of petitioner No. 2 to 5 of the above case Kanakavalli wife of Ramalinga swamy expired on 04.02.1995 Venkay campT.B. Dam Hosapete, Hosapete taluk Vijayanagar District.

WHEREAS, If any person/s interested with respect to the above matter is/are hereby noticed to appear in this Court in person or by a Pleader duly instructed, and able to answer all such questions, on the day of 29.06.2024 at 11.00 O clock in the noon, to answer the petition as on the day fixed, otherwise the petition will be disposed your absence.

Given under my hand and the seal of the Court, this 13th June 2024

Sd/- Chief Ministerial Officer
Addl. Civil Judge and JMFC at Hosapete

**L.S. Ananda, Advocate, Hosapete**

# ಪೌರಕಾರ್ಮಿಕರ ಸುರಕ್ಷತೆ ಮುಖ್ಯ ಪರಿಕರ ಬಳಸಿ : ನಿಗಾವಹಿಸಲು ಸೂಚನೆ

## ಪೌರಕಾರ್ಮಿಕರಿಗೆ ನಿಯಮಿತವಾಗಿ ಆರೋಗ್ಯ ತಪಾಸಣೆ ನಡೆಸಬೇಕು

### ಡಿಸಿ ಎಂ.ಎಸ್.ದಿವಾಕರ ಹೇಳಿಕೆ । ಜಿಲ್ಲಾಮಟ್ಟದ ಸಫಾಯಿ ಕರ್ಮಚಾರಿಗಳ ಜಾಗೃತ ಸಭೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಪೌರ ಕಾರ್ಮಿಕರಿಗೆ ಪ್ರತಿದಿನ ಸುರಕ್ಷತಾ ಪರಿಕರಗಳನ್ನು ವಿತರಿಸಬೇಕು ಮತ್ತು ಅವುಗಳನ್ನು ಧರಿಸಿಕೊಂಡು ಕೆಲಸ ನಿರ್ವಹಿಸುತ್ತಿರುವುದರ ಬಗ್ಗೆ ಪರಿಶೀಲಿಸಬೇಕು. ಪೌರಕಾರ್ಮಿಕರಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮತ್ತು ಮಾಸ್ಟರ್ ಚೆಕ್‌ಪ್‌ನ್ನು ನಿಯಮಿತವಾಗಿ ಮಾಡಿಸಬೇಕು ಎಂದು ಎಲ್ಲಾ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾಮಟ್ಟದ ಸಪಾಯಿ ಕರ್ಮಚಾರಿಗಳ ಜಾಗೃತಿ ಸಮಿತಿ ಸಭೆಯು ಅಧ್ಯಕ್ಷತೆವಹಿಸಿ ಬುಧವಾರ ಮಾತನಾಡಿದರು.

ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ವಸತಿ ಸೌಲಭ್ಯ ಕಲ್ಪಿಸುವುದರ ಬಗ್ಗೆ ನಿಯಮಾನುಸಾರ ಪರಿಶೀಲಿಸಬೇಕು. ಪೌರಕಾರ್ಮಿಕರಿಗೆ ಶೇ.24.10 ಮತ್ತು ಶೇ.20 ಅನುದಾನವನ್ನು ಮೀಸಲಿಟ್ಟಿದ್ದು ಸರ್ಕಾರಿ ಆದೇಶದನ್ವಯ ಅನುದಾನ ಉಪಯೋಗಿಸಬೇಕು. ಪೌರಕಾರ್ಮಿಕರಿಗೆ ಇಎಸ್‌ಐ ಮತ್ತು ಪಿಎಫ್ ಮೊತ್ತವನ್ನು ಪಾವತಿಯ ಬಗ್ಗೆ ಹಾಗೂ ಪ್ರತಿ ಮಾಹೆ ವೇತನ ಚೀಟಿ ನೀಡುವ ಕಾರ್ಯ ಅಚ್ಚುಕಟ್ಟಾಗಿ ನಡೆಯಬೇಕು. ನಗರ ಸ್ಥಳೀಯ ಸಂಸ್ಥೆ ಮತ್ತು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಶೌಚಾಲಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಬೇಕು. ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯತಿ ಪೌರ ಕಾರ್ಮಿಕರಿಗೆ ವಿಶ್ರಾಂತಿ ಗೃಹ ನಿರ್ಮಾಣದ ಬೇಡಿಕೆಗಳ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕು. ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸಫಾಯಿ ಕರ್ಮಚಾರಿಗಳಿಗೆ ಸೌಲಭ್ಯಗಳು ಕಾಲಮಿತಿಯೊಳಗೆ ಸಿಗುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಹೊಸಪೇಟೆ ನಗರ ಸಭೆಯಿಂದ ಸಫಾಯಿ ಕರ್ಮಚಾರಿಗಳಿಗೆ ನಿವೇಶನ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಹರಪನಹಳ್ಳಿಯಲ್ಲಿ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆಯನ್ನು 03 ತಿಂಗಳಿಗೊಮ್ಮೆ ಮಾಡಿಸುತ್ತಿದ್ದು, ಮಾಸ್ಟರ್ ಹೆಲ್ತ್ ಚೆಕ್ ಅಪ್‌ಗಾಗಿ 2023–24ನೇ ಸಾಲಿನ ಶೇ.24.10ರ ಕ್ರಿಯಾ ಯೋಜನೆಯಲ್ಲಿ ಕಾಯ್ದಿರಿಸಿದೆ. ಹಗರಿಬೊಮ್ಮನಹಳ್ಳಿಯ ಪುರಸಭೆಯಿಂದ 24 ಜನ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ವಸತಿ ಸೌಲಭ್ಯ ಹಾಗೂ 19 ಜನ ಪೌರಕಾರ್ಮಿಕರಿಗೆ ನಿವೇಶನ ಮಂಜೂರು ಮಾಡಲಾಗಿದೆ. ಹೂವಿನಹಡಗಲಿ ಪುರಸಭೆಯಿಂದ 12 ಜನ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ವಸತಿ ಕಲ್ಪಿಸಲಾಗಿದೆ. ಕಮಲಾಪುರ ಪುರಸಭೆಯಲ್ಲಿ 41 ಜನ ಪೌರಕಾರ್ಮಿಕರಿದ್ದು, ಈಗಾಗಲೇ 20 ಜನ ಪೌರಕಾರ್ಮಿಕರಿಗೆ ಸರ್ವೆ ನಂ:672/2 ರಲ್ಲಿ ನಿವೇಶನ ಹಂಚಿಕೆ ಮಾಡಲು ರಾಜೀವ್ ಗಾಂಧಿ



ನಿಗಮದಿಂದ ಹಕ್ಕು ಪತ್ರ ವಿತರಣೆ ಮಾಡಲಾಗಿದೆ. ಹೊಸದಾಗಿ ಖಾಯಂ ಆದ 21 ಜನ ಪೌರಕಾರ್ಮಿಕರಿಗೆ ಸರ್ವೆ ನಂಬರ್:672/2 ರಲ್ಲಿ ಬಾಕಿ ಉಳಿದ ಜಮೀನನ್ನು ಗುರುತಿಸಿದ್ದು ನಿವೇಶನ ಹಂಚಿಕೆ ಮಾಡಲು ಕ್ರಮವಹಿಸಲಾಗುವುದು. ಕೂಡ್ಲಿಗಿ ಪಟ್ಟಣ ಪಂಚಾಯತಿಯಿಂದ ಸರ್ವೆ ನಂಬರ್ 206ಎ/4 ರಲ್ಲಿ ಒಟ್ಟು 45 ನಿವೇಶನಗಳನ್ನು ರಚನೆ ಮಾಡಿದ್ದು ಈ ನಿವೇಶನಗಳನ್ನು ಎಲ್ಲಾ ಪೌರ ಕಾರ್ಮಿಕರಿಗೆ ಹಂಚಿಕೆ ಮಾಡಲಾಗಿದೆ. ಪಿಕೆಜಿಬಿವೈ ಖಾಯಂ ಯೋಜನೆ ಅಡಿಯಲ್ಲಿ 26 ಮನೆ ಮಂಜೂರಾಗಿದ್ದು, ಇದರಲ್ಲಿ 22 ಮನೆಗಳು ಸಂಪೂರ್ಣವಾಗಿದ್ದು ಬಾಕಿ ಮನೆಗಳು ಮುಕ್ತಾಯ ಹಂತದಲ್ಲಿದೆ. ಕೊಟ್ಟೂರು ಪಟ್ಟಣ ಪಂಚಾಯತಿಯಿಂದ ಒಟ್ಟು 33 ಪೌರಕಾರ್ಮಿಕರಲ್ಲಿ 14 ಜನ ಪೌರಕಾರ್ಮಿಕರಿಗೆ ಈಗಾಗಲೇ ಗೃಹಭಾಗ್ಯ ಯೋಜನೆಯ ಸೌಲಭ್ಯ ಪಡೆದಿರುತ್ತಾರೆ. ಪ್ರಸ್ತುತ 2 ಪೌರಕಾರ್ಮಿಕರ ಮಂಜೂರಾತಿ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಿದೆ. ಬಾಕಿ ಉಳಿದ 17 ಪೌರಕಾರ್ಮಿಕರು ನಿವೇಶನ ರಹಿತರಾಗಿರುತ್ತಾರೆ. ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ 04 ಜನ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ವಸತಿ ಸೌಲಭ್ಯ ಹಾಗೂ 04 ಜನ ಪೌರಕಾರ್ಮಿಕರಿಗೆ ನಿವೇಶನ ಮಂಜೂರು ಮಾಡಲಾಗಿರುತ್ತದೆ ಎಂದು ಆಯಾ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಪೌರಕಾರ್ಮಿಕರಿಗೆ ಸುರಕ್ಷಿತ ಪರಿಕರಗಳನ್ನು ಖರೀದಿಸಿ ವಿತರಿಸಲಾಗಿದ್ದು, ಅವುಗಳನ್ನು ಧರಿಸಿಕೊಂಡು ಕೆಲಸ ನಿರ್ವಹಿಸಲು ಪೌರಕಾರ್ಮಿಕರಿಗೆ ಸೂಚಿಸಲಾಗಿದ್ದು, ಕಡ್ಡಾಯವಾಗಿ ಸುರಕ್ಷಿತ ಧಿರಿಸುಗಳನ್ನು ಧರಿಸಿ ಕೆಲಸ ನಿರ್ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯತಿಯಿಂದ ಪೌರಕಾರ್ಮಿಕರಿಗೆ ವಿಶ್ರಾಂತಿಗಾಗಿ ಪಟ್ಟಣ ಪಂಚಾಯತಿ ಕಟ್ಟಡದಲ್ಲಿ ವಿಶ್ರಾಂತಿ ಕಟ್ಟಡ ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆ. ಕಮಲಾಪುರ ಪುರಸಭೆ ವ್ಯಾಪ್ತಿಯಲ್ಲಿ ಹೊಸ ಕಟ್ಟಡ ನಿರ್ಮಾಣವಾಗುತ್ತಿದ್ದು ಅದರಲ್ಲಿ ವಿಶ್ರಾಂತಿ ಗೃಹ ನಿರ್ಮಾಣ ವ್ಯವಸ್ಥೆ ಮಾಡಲಾಗುವುದು. ಹೂವಿನಹಡಗಲಿ ಪುರಸಭೆ ವ್ಯಾಪ್ತಿಯಲ್ಲಿ ಹೊಸ ಕಟ್ಟಡ ನಿರ್ಮಾಣವಾಗುತ್ತಿದ್ದು ಅದರಲ್ಲಿ ವಿಶ್ರಾಂತಿ ಕಟ್ಟಡ ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆ. ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ 70 ಶೌಚಾಲಯಗಳನ್ನು ನಿರ್ವಹಣೆಗಾಗಿ ಹೊರಗುತ್ತಿಗೆ ಏಜೇನ್ಸಿಯವರಿಗೆ ನೀಡಿದ್ದು, ಪ್ರತಿದಿನ ಸ್ವಚ್ಛತೆಯ ಬಗ್ಗೆ ನಗರಸಭೆಯಿಂದ ತಪಾಸಣೆ ನಡೆಸಲಾಗುತ್ತಿದ್ದು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ 01 ಸಾರ್ವಜನಿಕ ಶೌಚಾಲಯ ಹಾಗೂ 7 ಸಮುದಾಯ ಶೌಚಾಲಯಗಳನ್ನು, ಹಗರಿಬೊಮ್ಮನಹಳ್ಳಿಯಲ್ಲಿ 2 ಸಾರ್ವಜನಿಕ ಶೌಚಾಲಯ ಹಾಗೂ 7 ಸಮುದಾಯ ಶೌಚಾಲಯಗಳನ್ನು, ಹೂವಿನಹಡಗಲಿಯಲ್ಲಿ 2 ಸಾರ್ವಜನಿಕ ಶೌಚಾಲಯ ಹಾಗೂ 7 ಸಮುದಾಯ ಶೌಚಾಲಯಗಳನ್ನು, ಕಮಲಾಪುರ ಪುರಸಭೆ ವ್ಯಾಪ್ತಿಯಲ್ಲಿ 02 ಸಾರ್ವಜನಿಕ ಶೌಚಾಲಯಗಳನ್ನು, ಕೂಡ್ಲಿಗಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದೆ. ಕೊಟ್ಟೂರು ಪಟ್ಟಣದಲ್ಲಿನ 1 ಸಾರ್ವಜನಿಕ ಶೌಚಾಲಯವನ್ನು ಕೆ.ಎಸ್.ಆರ್.ಟಿ.ಸಿ ಇಲಾಖೆಯವರು ನಿರ್ವಹಣೆ ಮಾಡಲಾಗುತ್ತಿದ್ದು ಪಟ್ಟಣ ಪಂಚಾಯತಿಯಿಂದ ನಿಯಮಿತವಾಗಿ ಪರಿಶೀಲನೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಸಫಾಯಿ ಕರ್ಮಚಾರಿಗಳಿಗೆ ನಾನಾ ಸೌಲಭ್ಯ ನೀಡಲಾಗಿದೆ. ಹೂವಿನಹಡಗಲಿಯ ಪುರಸಭೆಯಲ್ಲಿ 12 ಜನ ಪೌರಕಾರ್ಮಿಕರಿಗೆ 50,000 ಸಹಾಯ ಧನ ಮಂಜೂರಾಗಿದೆ. ಮತ್ತು ಪೌರ ಕಾರ್ಮಿಕರ 25 ಮಕ್ಕಳಿಗೆ ಟ್ಯಾಬ್ ವಿತರಿಸಲಾಗಿದೆ. ಹಗರಿಬೊಮ್ಮನಹಳ್ಳಿ ಪುರಸಭೆಯಿಂದ 07 ಜನ ಪೌರ ಕಾರ್ಮಿಕರ ಮಕ್ಕಳಿಗೆ ಟ್ಯಾಬ್ ಮಂಜೂರು ಮಾಡಲಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ವಿವಿಧ ನಿಗಮಗಳ ಜಿಲ್ಲಾ ವ್ಯವಸ್ಥಾಪಕರು ಮತ್ತು ಇನ್ನಿತರ ಅಧಿಕಾರಿಗಳು ಇದ್ದರು.

# ಸಂತ ಅಂತೋಣಿಯವರ ಹಬ್ಬ ಆಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ:**

ನಗರದ ಕ್ಯಾಥೊಲಿಕ್ ಕ್ರೈಸ್ತ ಭಕ್ತಾದಿಗಳು ಗುರುವಾರ ಅತ್ಯಂತ ಭಕ್ತಿ ಪೂರ್ವಕವಾಗಿ "ಸಂತ ಅಂತೋಣಿ " ಯವರ ಜಯಂತಿಯನ್ನು ಭಕ್ತಿಯಿಂದ ಆಚರಿಸಿದರು.

ಡಾನ್ ಬೋಸ್ಕೋದ ಪಾದರ್ ಪ್ರವೀಣ್. ಮಾತನಾಡಿ, ದೇವರು ನಮಗೆ ಕಾಣದ ಹಾಗೇ ಎಷ್ಟೋ ಸಹಾಯವನ್ನು ಮಾಡುತ್ತಿರುತ್ತಾರೆ. ಅವರು ಸಂತರ ಮುಖಾಂತರವೂ ನಮಗೆ ಸಹಾಯವಾಗುವಂತ ವರಗಳನ್ನು ದಯಪಾಲಿಸುತ್ತಾರೆ ಎಂಬುದನ್ನು ನಾವು ಅರಿಯಬೇಕಿದೆ. ಸಂತರು ಕಳೆದ ಹೋದ. ವಸ್ತುಗಳೊಂದೇ ಅಲ್ಲ, ಕಳೆದು ಹೋದ ಆದ್ಯಾತ್ಮಿಕ ವಿಚಾರಗಳನ್ನೂ ಕೂಡಾ ದೊರಕಿಸುತ್ತಾರೆ ಎಂದು ಪ್ರವಚನದಲ್ಲಿ ತಿಳಿಸಿದರು.

ನಾವು ಸನ್ಮಾರ್ಗದಲ್ಲಿ ನಡೆಯಲು ಸಂತರ ನಿಯಮಗಳನ್ನು ಪಾಲಿಸ ಬೇಕೆಂದರು. ಪ್ರಾರ್ಥನಾ ವಿಧಿವಿಧಾನ ಕಾರ್ಯಗಳು ಸೆಕ್ರೆಡ್ ಹಾರ್ಟ ಚರ್ಚಿನ ಗುರುಗಳಾದ ಪಾದರ್ ಭಗವಂತ್ ರಾಜ್ ನೇತೃತ್ವ ದಲ್ಲಿ ನಡೆದವು. ಅತಿಥಿಗಳಾಗಿ ಡಾನ್ ಬೊಸ್ಕೋದ ಪಾದರ್ ಪಾಯಸ್ ಪಾಲ್ಗೊಂಡಿದ್ದರು. ಪೂಜಾ ಕಾರ್ಯಕ್ರಮ ಕ್ಕೂ ಮುನ್ನ ಸಂತ ಅಂತೋಣಿಯವರ ಮೂರ್ತಿಯನ್ನು ಚರ್ಚ್‌ನ ಆವರಣದ ಸುತ್ತಲೂ




ಮೆರವಣಿಗೆ ಯಲ್ಲಿ ಕೊಂಡಯ್ಯಲಾಯಿತು. ಭಕ್ತರು ಶ್ರದ್ಧೆಯಿಂದ ಪಾಲ್ಗೊಂಡಿದ್ದರು.

## ವಿಜ್ಞಾನ

# ಉರಿವ ಜ್ವಾಲೆಯು ಏಕೆ ನೆರಳನ್ನು ಉಂಟುಮಾಡುವುದಿಲ್ಲ?

■ **ಆರ್.ಬಿ.ಗುರುಬಸವರಾಜ**

ಅಪಾರದರ್ಶಕ ವಸ್ತುಗಳು ಬೆಳಕಿನ ಚಲನೆಗೆ ನಿರ್ಬಂಧ ಹಾಕಿದಾಗ ಅಪಾರದರ್ಶಕ ವಸ್ತುವಿನ ಹಿಂದೆ ನರಳು ರೂಪುಗೊಳ್ಳುತ್ತದೆ. ಅಂದರೆ ಬೆಳಕಿನ ಮೂಲದ ಮುಂದೆ ಅಪಾರದರ್ಶಕ ವಸ್ತುವನ್ನು ಇರಿಸಿದಾಗ, ಅದು ಬೆಳಕನ್ನು ನಿರ್ಬಂಧಿಸುತ್ತದೆ ಮತ್ತು ವಸ್ತುವಿನ ಹಿಂಭಾಗದಲ್ಲಿ ನೆರಳು ರೂಪುಗೊಳ್ಳುತ್ತದೆ.

ಬೆಂಕಿಯು ಒಂದು ಬೆಳಕಿನ ಮೂಲವಾಗಿದ್ದು, ಉರಿವ ಬೆಂಕಿಯು ಏಕೆ ನೆರಳನ್ನು ಉಂಟು ಮಾಡುವುದಿಲ್ಲ? ಎಂಬ ಪ್ರಶ್ನೆ ಕಾಡುತ್ತದೆ. ಜ್ವಾಲೆಯಂತಹ ಬೆಂಕಿಯ ಮೂಲದಿಂದ ಬೆಳಕು ವಸ್ತುವನ್ನು



ತಾಕಿದಾಗ, ವಸ್ತುವು ಅದನ್ನು ಹೀರಿಕೊಳ್ಳಬಹುದು ಅಥವಾ ಪ್ರತಿಫಲಿಸಬಹುದು. ವಸ್ತುವು ಬೆಳಕನ್ನು ಹೀರಿಕೊಂಡರೆ, ಅದು ಕತ್ತಲೆಯಾಗಿ ಕಾಣುತ್ತದೆ ಮತ್ತು ಅದರ ಹಿಂದೆ ನೆರಳು ಸೃಷ್ಟಿಸುತ್ತದೆ. ಮತ್ತೊಂದೆಡೆ ವಸ್ತುವು ಬೆಳಕನ್ನು ಪ್ರತಿಫಲಿಸಿದರೆ, ಅದು ಪ್ರಕಾಶಮಾನವಾಗಿ ಕಾಣುತ್ತದೆ ಮತ್ತು ನೆರಳು ಬೀಳುವುದಿಲ್ಲ.

ಬೆಂಕಿಯು ಬೆಳಕನ್ನು ಹೊರಸೂಸಿದಾಗ ಮತ್ತು ವಸ್ತುವನ್ನು ಅದರ ಮುಂದೆ ಇರಿಸಿದಾಗ, ವಸ್ತುವು ಕೆಲವು ಬೆಳಕನ್ನು ನಿರ್ಬಂಧಿಸುತ್ತದೆ. ಅದರ ಹಿಂದೆ ನೆರಳು ಸೃಷ್ಟಿಯಾಗುತ್ತದೆ. ನೆರಳಿನ ಗಾತ್ರ ಮತ್ತು ಆಕಾರವು ಬೆಂಕಿ ಮತ್ತು ವಸ್ತುವಿನ ನಡುವಿನ ಅಂತರವನ್ನು ಅವಲಂಬಿಸಿರುತ್ತದೆ. ಜೊತೆಗೆ ವಸ್ತುವಿನ ಸ್ಥಾನ ಮತ್ತು ಗಾತ್ರವನ್ನು ಅವಲಂಬಿಸಿರುತ್ತದೆ.

ಉರಿವ ಬೆಂಕಿಯ ಜ್ವಾಲೆಗಳು ನೆರಳನ್ನು ಸೃಷ್ಟಿಸುವುದಿಲ್ಲ. ಏಕೆಂದರೆ ಜ್ವಾಲೆಗಳು ಎಲ್ಲಾ ದಿಕ್ಕುಗಳಲ್ಲಿ ಬೆಳಕನ್ನು ಹೊರಸೂಸುತ್ತಿರುತ್ತವೆ. ಆದ್ದರಿಂದ ಅದು ಬೆಳಕನ್ನು ನಿರ್ಬಂಧಿಸುವುದಿಲ್ಲ ಮತ್ತು ನೆರಳನ್ನು ಸೃಷ್ಟಿಸುವುದಿಲ್ಲ. ಅಲ್ಲದೇ ಉರಿವ ಜ್ವಾಲೆಯು ಭೌತಿಕ ವಸ್ತುವಲ್ಲ. ಅದು ಬೆಳಕು ಮತ್ತು ಶಾಖವನ್ನು ಉತ್ಪಾದಿಸುವ ರಾಸಾಯನಿಕ ಕ್ರಿಯೆಯಾಗಿದೆ ಎಂಬುದು ಗಮನಿಸಬೇಕಾದ ಸಂಗತಿ. ಆದ್ದರಿಂದ ಘನ ವಸ್ತುವಿನಂತೆ ನೆರಳು ಉಂಟು ಮಾಡುವುದಿಲ್ಲ.

ಕೆಲವು ಸಂದರ್ಭಗಳಲ್ಲಿ, ಜ್ವಾಲೆಯು ನೆರಳು ತರಹದ ಪರಿಣಾಮವನ್ನು ಉಂಟುಮಾಡುತ್ತದೆ ಎಂದು ಗಮನಿಸಬೇಕಾದ ಅಂಶವಾಗಿದೆ. ಜ್ವಾಲೆಯಲ್ಲಿನ ಪ್ಲಾಸ್ಮಾವು ನೆರಳಿನ ಛಾಯೆಗಳ ದೃಷ್ಟಿಭ್ರಮೆಯನ್ನುಂಟು ಮಾಡುತ್ತದೆ. ಆದರೆ ಅದು ನಿಜವಾದ ನೆರಳಲ್ಲ.

# 10 ದಿನ ಉಧ್ಯಮಶೀಲತಾಭಿವೃದ್ಧಿ ತರಬೇತಿ: ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಮತ್ತು ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ ಬೆಂಗಳೂರು, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ವಿಜಯನಗರ ಇವರ ಸಂಯುಕ್ತಾಶ್ರಯದಲ್ಲಿ ಸ್ವಯಂ ಉದ್ಯೋಗ ಪ್ರಾರಂಭಿಸುವ ನಿರುದ್ಯೋಗ ಯುವಕ ಯುವತಿಯರಿಗೆ ಮತ್ತು ಉಧ್ಯಮ ಆಕಾಂಕ್ಷಿಗಳಿಗೆ ಹತ್ತು ದಿನಗಳ ಉಧ್ಯಮಶೀಲತಾಭಿವೃದ್ಧಿ ತರಬೇತಿಗೆ ಅರ್ಜಿ ಅಹ್ವಾನಿಸಲಾಗಿದೆ.

ತರಬೇತಿಯಲ್ಲಿ ಸ್ವಂತ ಉಧ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಸರ್ಕಾರದ ಸ್ವಂತ ಉದ್ಯೋಗದ ಯೋಜನೆಗಳು, ಬ್ಯಾಂಕಿನ ವ್ಯವಹಾರ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ, ಹಾಗೂ ಉಧ್ಯಮ ನಿರ್ವಹಣೆ, ಉಧ್ಯಮಶೀಲತೆ, ಉಧ್ಯಮ ಪ್ರಾರಂಭದ ಹಂತಗಳು, ಉಧ್ಯಮಗಳನ್ನು ಪ್ರಾರಂಭಿಸಲು ಸರ್ಕಾರದ ಯೋಜನೆಗಳು, ಸಾಲ ಸೌಲಭ್ಯಗಳು, ಬ್ಯಾಂಕ್ ಬಗ್ಗೆ, ಜಾಹಿರಾತು ಮತ್ತು ಮಾರುಕಟ್ಟೆಯ ಕುರಿತು ನೊಂದಣಿ ಮಾಡುವ ವಿಧಾನಗಳು, ಯಶಸ್ವಿ ಉಧ್ಯಮಿಗಳ ಜೊತೆ ಸಂವಾದ, ಉದ್ಯಮ ನಿರ್ವಹಣೆ ಮಾಡುವ ವಿಧಾನಗಳು ಮತ್ತು ಇತ್ಯಾದಿ ವಿಷಯಗಳ ಕುರಿತು ತರಬೇತಿಯನ್ನು ನೀಡಲಾಗುವುದು. ಈ ಪ್ರಯುಕ್ತ ವಿಜಯನಗರ ಜಿಲ್ಲೆಯ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು 18 ವರ್ಷದಿಂದ 45 ವರ್ಷದೊಳಗಿರಬೇಕು. ಹಾಗೂ ಎಸ್.ಎಸ್.ಎಲ್.ಸಿ ಪಾಸಾಗಿರಬೇಕು. ಅರ್ಜಿ ಸಲ್ಲಿಸಲು ಜೂನ್ 20 ಕೊನೆಯ ದಿನವಾಗಿದೆ. ಆಸಕ್ತರು, ಅರ್ಜಿಯನ್ನು ಕರೆ ಮಾಡುವುದರ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 6362681190, 7204016012 ಈ ನಂಬರಿಗೆ ಸಂಪರ್ಕಿಸಬಹುದಾಗಿದೆ ಎಂದು ವಿಜಯನಗರ ಸಿಡಾಕ್ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

# ಸಫಾಯಿ ಕರ್ಮಚಾರಿಗಳ ಪ್ರಗತಿ ಪರಿಶೀಲನಾ ಸಭೆ ಇಂದು

■ **ಹಂಪಿ ಟೈಮ್ಸ್ ಹೊಸಪೇಟೆ**

ಸಫಾಯಿ ಕರ್ಮಚಾರಿ ರಾಷ್ಟ್ರೀಯ ಆಯೋಗದ ಅಧ್ಯಕ್ಷರಾದ ಎಂ. ವೆಂಕಟೇಶನ್ ಅವರು ಜೂ. 14ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಡಿಸಿ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಫಾಯಿ ಕರ್ಮಚಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸುವರು ಎಂದು ವಿಜಯನಗರ ಜಿಲ್ಲೆಯ ಜಿಲ್ಲಾ ನಗರಾಬಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA